**ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 20-04-2019 ರಂದು ಮುಂಜಾನೆ 11-00 ಗಂಟೆಗೆ, ಬಾಗಲಕೋಟೆ ಜಿಲ್ಲೆಯ ಬರಪರಿಸ್ಥಿತಿ ನಿರ್ವಹಣೆ ಕುರಿತು ಜರುಗಿದ ಸಭೆಯ ನಡುವಳಿಗಳು:**

-*-*-*-*-

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಜಿಲ್ಲಾಧಿಕಾರಿಗಳು, ಬಾಗಲಕೋಟೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಬಾಗಲಕೋಟೆ
3. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಬಾಗಲಕೋಟೆ
4. ಉಪ ಕಾರ್ಯದರ್ಶಿಗಳು,ಜಿಲ್ಲಾ ಪಂಚಾಯತ್ ಬಾಗಲಕೋಟೆ
5. ಮುಖ್ಯ ಅಭಿಯಂತರರು,ಬಿಟಿಡಿಎ ಬಾಗಲಕೋಟೆ [ ಪ್ರತಿನಿಧಿ ]
6. ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಬಾಗಲಕೋಟೆ
7. ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಬಾಗಲಕೋಟೆ
8. ಉಪನಿರ್ದೇಶಕರು, ಪಶು ಪಾಲನಾ ಮತ್ತು ಪಶು ಸಂಗೋಪನಾ ಇಲಾಖೆ ಬಾಗಲಕೋಟೆ
9. ಕಾರ್ಯನಿರ್ವಾಹಕ ಅಧಿಕಾರಿಗಳು,ತಾ.ಪಂ.ಬಾಗಲಕೋಟ/ಬದಾಮಿ/ಹುನಗುಂದ/ಜಮಖಂಡಿ/ ಮುಧೋಳ/ಬೀಳಗಿ
10. ಉಪವಿಭಾಗಾಧಿಕಾರಿಗಳು, ಬಾಗಲಕೋಟೆ/ಜಮಖಂಡಿ
11. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬಾಗಲಕೋಟೆ (ಎಲ್ಲ ಕಾ.ನಿ.ಅಭಿಯಂತರರೊಂದಿಗೆ)
12. ಕಾರ್ಯನಿರ್ವಾಹಕ ಅಭಿಯಂತರರು, RWS & D ಬಾಗಲಕೋಟೆ (ಎಲ್ಲ ಸ.ಕಾ.ನಿ ಅಬಿಯಂತರರೊಂದಿಗೆ)
13. ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ವಿಜಯಪುರ (ಎಲ್ಲ ಸ.ಕಾ.ನಿ ಅಭಿಯಂತರರೊಂದಿಗೆ)
14. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ
15. ಕಾರ್ಯನಿರ್ವಾಹಕ ಅಭಿಯಂತರರು, ಜಿ ಎಲ್ ಬಿ ಸಿ ಜಮಖಂಡಿ, ಬೀಳಗಿ
16. ಕಾರ್ಯನಿರ್ವಾಹಕ ಅಭಿಯಂತರರು, ಜಿ ಆರ್ ಬಿ ಸಿ ಬಾಗಲಕೋಟೆ
17. ಜಿ ಎಲ್ ಬಿ ಸಿ,ಜಿ ಆರ್ ಬಿ ಸಿ ನೋಡಲ್ ಅಧಿಕಾರಿಗಳು
18. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಮಾಜಿಕ ವಲಯ ಬಾಗಲಕೋಟೆ
19. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಲಯ ಬಾಗಲಕೋಟೆ [ ಪ್ರತಿ ನಿಧಿ ]

ಅಪರ ಜಿಲ್ಲಾಧಿಕಾರಿಗಳು, ಸಭೆಗೆ ಆಗಮಿಸಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಅನುಮತಿ ಕೋರಿ ಸಭೆಯನ್ನು ಪ್ರಾರಂಭಿಸಿದರು.

ಪ್ರಾರಂಭದಲ್ಲಿ ಹಿಂದಿನ ಸಭೆಯಲ್ಲಿ ನೀಡಲಾದ ನಿರ್ದೇಶನಗಳ ಬಗ್ಗೆ ಅನುಸರಣಾ ವರದಿಯನ್ನು ಪರಿಶೀಲಿಸಲಾಯಿತು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಹಿಂದಿನ ಸಭೆಯಲ್ಲಿ ನೀಡಲಾದ ನಿರ್ದೇಶನಗಳನ್ನು ಅನುಸರಣೆ ಮಾಡದೇ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಈ ಕೆಳಕಂಡ ಅಂಶಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

## ಕುಡಿಯುವ ನೀರು ಪೂರೈಕೆ : ಗ್ರಾಮೀಣ ಪ್ರದೇಶ :-

ಮಾನ್ಯ ಅಧ್ಯಕ್ಷರು, ಸಭೆಯ ಪ್ರಾರಂಭದಲ್ಲಿ ಮಹಾರಾಷ್ಟ್ರ ರಾಜ್ಯದ ಕೋಯ್ನಾ ಜಲಾಯದಿಂದ ನೀರು ಬಿಡುಗಡೆ ಕುರಿತು ಇನ್ನೂ ಸ್ಪಷ್ಟ ಆದೇಶಗಳು ಇರುವುದಿಲ್ಲ ಕಾರಣ ಕೃಷ್ಣಾ ನದಿಗೆ ನೀರು ಬಾರದೇ ಇದ್ದಲ್ಲಿ ಜೂನ್-2019 ರ ವರೆಗೆ ಗ್ರಾಮೀಣ ಪ್ರದೇಶದಲ್ಲಿ ಕೃಷ್ಣಾ ನದಿ ನೀರಿಗೆ ಅವಲಂಬಿತವಾಗಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಯಾವ ಕ್ರಮವಹಿಸಲಾಗಿದೆ ಹಾಗೂ ಎಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ ಎಂಬುದರ ಕುರಿತು ವಿವರಣೆ ಒದಗಿಸಲು ಕಾರ್ಯ ನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ ಇವರಿಗೆ ಸೂಚಿಸಿದರು.

ಕಾರ್ಯ ನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ ಇವರು ಜಿಲ್ಲೆಯಲ್ಲಿ ಕೃಷ್ಣಾ ನದಿಗೆ
ಜಮಖಂಡಿ ತಾಲ್ಲೂಕಿನಲ್ಲಿ 6 ಎಂವ್ಹಿಎಸ್ ಯೋಜನೆಯಡಿ 29 ಗ್ರಾಮಗಳು
ಹುನಗುಂದ ತಾಲ್ಲೂಕಿನಲ್ಲಿ 4 ಎಂವ್ಹಿಎಸ್ ಯೋಜನೆಯಡಿ 86 ಗ್ರಾಮಗಳು
ಬಾಗಲಕೋಟೆ ತಾಲ್ಲೂಕಿನಲ್ಲಿ 5 ಎಂವ್ಹಿಎಸ್ ಯೋಜನೆಯಡಿ 45 ಗ್ರಾಮಗಳು ಬರುತ್ತವೆ ಎಂದು ವಿವರಣೆ ಒದಗಿಸಿದರು.

ಅಧ್ಯಕ್ಷರು, ಆಲಮಟ್ಟಿ ಜಲಾಶಯದಿಂದ ಮತ್ತು ನಾರಾಯಣಪೂರ ಜಲಾಶಯದ ಹಿನ್ನೀರಿನಿಂದ ಕುಡಿಯುವ ನೀರಿಗೆ ಅವಲಂಭಿತವಾಗಿರುವ ಗ್ರಾಮಗಳಲ್ಲಿ ಹಿನ್ನೀರು ಲಭ್ಯವಿರುವದರಿಂದ ಕುಡಿಯುವ ನೀರಿನ ಸಮಸ್ಯೆ ಇರುವ ಬಗ್ಗೆ ಕೇಳಿದಾಗ ಕಾರ್ಯ ನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬಾಗಲಕೋಟೆ ಇವರು ಈ ಎರಡು ಜಲಾಶಯಗಳಿಗೆ ಸಂಬಂಧಿಸಿದಂತೆ, ಜಲಾಶಯಗಳಲ್ಲಿ ನೀರು ಲಭ್ಯವಿರುವದರಿಂದ ಹುನಗುಂದ, ಹಾಗೂ ಬಾಗಲಕೋಟೆ ತಾಲ್ಲೂಕುಗಳಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲವೆಂದು ವಿವರಿಸಿದರು.

ಅಧ್ಯಕ್ಷರು, ಜಮಖಂಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಗೆ ಅವಲಂಭಿತ ಇರುವ ಎಂವ್ಹಿಎಸ್ ಯೋಜನೆವಾರು ವಿವರಣೆ ಹಾಗೂ ಅವುಗಳಿಗೆ ಪರ್ಯಾಯ ವ್ಯವಸ್ಥೆ ಒದಗಿಸುವ ಕುರಿತು ಕೈಗೊಂಡಿರುವ ತಯಾರಿ ಕುರಿತು ವಿವರಣೆ ಒದಗಿಸಲು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಪವಿಭಾಗ ಜಮಖಂಡಿ ಇವರು 6 ಯೋಜನೆಗಳ ಪೈಕಿ

1. ಜಕನೂರ ಮತ್ತು ಇತರೆ 6 ಗ್ರಾಮಗಳು

   ಲಭ್ಯವಿರುವ ಕೊಳವೆಬಾವಿಗಳಿಂದ ಹಾಗೂ MWS ಯೋಜನೆಯಿಂದ ನೀರು ಪೂರೈಕೆ ಮಾಡಲಾಗುತ್ತಿದ್ದು, ಮೇ-20 ವರೆಗೆ ಸಮಸ್ಯೆ ಉಂಟಾಗುವುದಿಲ್ಲವೆಂದು ವಿವರಿಸಿದರು.

2. ಕನ್ನೊಳ್ಳಿ ಹಾಗೂ ಇತರ 5 ಗ್ರಾಮಗಳು.

   ಹಿರೇಪಡಸಗಿ ಗ್ರಾಮದಲ್ಲಿ ಜಾಕವೇಲ್ ಇದ್ದು, ಚಿಕ್ಕಪಡಲಗಿ ಬ್ಯಾರೇಜಿನ ಹಿನ್ನೀರಿನಿಂದ ನೀರು ಪೂರೈಕೆ ಮಾಡುತ್ತಿದ್ದು, ಲಭ್ಯವಿರುವ ನೀರು ಕೇವಲ ಒಂದುವಾರದವರೆಗೆ ಮಾತ್ರ ಸಾಕಾಗುತ್ತಿದೆ. ಪರ್ಯಾಯವಾಗಿ ಟಿಟಿಎಫ್-3 ರಲ್ಲಿ ಕೊಳವೆಬಾವಿಗಳನ್ನು ಕೊರೆದು ತುರ್ತು ನೀರು ಪೂರೈಕೆ ಮಾಡಲಾಗುವುದೆಂದು ವಿವರಿಸಿದರು.

ಈ 5 ಗ್ರಾಮಗಳ ಪೈಕಿ ಗೋಠೆ ಗ್ರಾಮದಲ್ಲಿ ಮಾತ್ರ ತೀವ್ರ ಕುಡಿಯುವ ನೀರಿನ ಸಮಸ್ಯೆ ಇದ್ದು, ಅಲ್ಲಿ ಈಗಾಗಲೇ 7 ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿದ್ದು, ಇದರಿಂದ ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಕೊಳವೆಬಾವಿಗಳನ್ನು ಕೊರೆದು ಒಂದು ವಾರದೊಳಗಾಗಿ ಕಾಮಗಾರಿ ಮುಕ್ತಾಯಗೊಳಿಸಿ, ನೀರು ಪೂರೈಕೆ ಮಾಡಲು ಸೂಚಿಸಿದರು. ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಪವಿಭಾಗ ಜಮಖಂಡಿ ಇವರು ಪ್ರಸ್ತುತ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಹಾಗೂ ನೀತಿ ಸಂಹಿತೆ ಮುಗಿದ ತಕ್ಷಣವೇ ಇಲಾಖೆಯಿಂದ ಅಲ್ಪಾ ಅವಧಿ ಟೆಂಡರ್ ಕರೆದು ಕ್ರಮವಹಿಸಬೇಕೆಂದರೂ ಸಹಿತ ಸುಮಾರು 15–20 ದಿನಗಳ ಕಾಲಾವಕಾಶ ಬೇಕಾಗುತ್ತದೆ ಎಂದು ವಿವರಿಸಿದರು.

ತುಂಗಳ ಗ್ರಾಮದಲ್ಲಿ ನೀರು ಲಭ್ಯವಿದ್ದು, ಯಾವುದೇ ಸಮಸ್ಯೆ ಸಧ್ಯಕ್ಕೆ ಇರುವುದಿಲ್ಲ. ಯಲ್ಲಟ್ಟಿ ಗ್ರಾಮದಲ್ಲಿ ಪ್ರಸ್ತುತ ಲಭ್ಯವಿರುವ ನೀರು ಒಂದು ತಿಂಗಳವರೆಗೆ ಸಾಕಾಗುತ್ತದೆ ಎಂದು ವಿವರಿಸಿದರು. ಅಧ್ಯಕ್ಷರು ಈಗಿನಿಂದಲೇ ಪೂರ್ವ ತಯ್ಯಾರಿ ಮಾಡಿಕೊಂಡು, ಲಭ್ಯವಿರುವ ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಿ, ಅದರಿಂದ ನೀರು ಪೂರೈಕೆ ಮಾಡಲು ಆದ್ಯತೆಯ ಮೇಲೆ ಕ್ರಮವಹಿಸಲು ಸೂಚಿಸಿದರು.

ಹಳಿಂಗಳಿ ಗ್ರಾಮದಲ್ಲಿ MWS ದಿಂದ ನೀರು ಪೂರೈಕೆ ಮಾಡಲಾಗುತ್ತಿದ್ದು, ಹಳಿಂಗಳಿ ಗ್ರಾಮದ ಸುತ್ತಮುತ್ತಲು ನೀರಾವರಿ ಪ್ರದೇಶವಿರುವದರಿಂದ ಬೋರವೆಲ್‌ಗಳಲ್ಲಿ ಅಂತರ್ಜಲಮಟ್ಟ ಚೆನ್ನಾಗಿರುವುದರಿಂದ ಹಾಗೂ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಪಡೆದು ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಯಾವ ಯಾವ ಗ್ರಾಮಗಳಲ್ಲಿ NGS and Non NGS ಫೀಡರ್‌ಗಳಿಂದ ವಿದ್ಯುತ ಸಂಪರ್ಕ ಒದಗಿಸಲು ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಇವರಿಗೆ ಸೂಚಿಸಿದಾಗ, ಅಧೀಕ್ಷಕ ಅಭಿಯಂತರರು, ಸಮೀಪ ಇದ್ದಲ್ಲಿ ಸೌಲಭ್ಯ ಕಲ್ಪಿಸುವುದಾಗಿ ತಿಳಿಸಿದರು.

ಕಡಕೋಳ ಗ್ರಾಮದಲ್ಲಿ ಹಾಗೂ ಹುನಗುಂದ, ಬಾಗಲಕೋಟೆ ಮತ್ತು ಬೀಳಗಿ ತಾಲ್ಲೂಕಿನಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಗ್ರಾಮೀಣ ಪ್ರದೇಶದಲ್ಲಿ ಇರುವುದಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು ವಿವರಿಸಿದರು.

ಅಧ್ಯಕ್ಷರು, ಇಲಾಖೆಯಿಂದ ಹೊಸ ಕೊಳವೆಬಾವಿ ಕೊರೆದು ಆಧ್ಯತೆಯ ಮೇಲೆ ನೀರು ಪೂರೈಕೆ ಮಾಡಬೇಕಾಗಿದ್ದು, ತುರ್ತು ಕ್ರಮವಹಿಸಲು ಸಾಧ್ಯವಾಗದೇ ಇದ್ದಲ್ಲಿ ಬೇರೆ ಇಲಾಖೆಗಳಾದ ಕೆ.ಆರ್.ಐ.ಡಿ.ಎಲ್. ಹಾಗೂ ತಾಲ್ಲೂಕ ಪಂಚಾಯತಿ ಹಾಗೂ ಗ್ರಾಮ ಪಂಚಾಯತ ಮಟ್ಟದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ನಿಗದಿತ ಅವಧಿಯಲ್ಲಿ ನೀರು ಪೂರೈಕೆ ಮಾಡಲು ಸೂಚನೆಗಳನ್ನು ನೀಡಿದರು.

**<u>ಜಿ.ಎಲ್.ಬಿ.ಸಿ. ಹಾಗೂ ಜಿ.ಆರ್.ಬಿ.ಸಿ. ಕಾಲುವೆಗಳ ಮೂಲಕ ನೀರು ಬಿಡುಗಡೆಗೊಳಿಸಿರುವ ಕುರಿತು:</u>**

ಅಧ್ಯಕ್ಷರು, ಈಗಾಗಲೇ ನನ್ನ ಹತ್ತಿರ ಜಿ.ಎಲ್.ಬಿ.ಸಿ ಕಾಲುವೆಗಳಲ್ಲಿ ಸಾಕಷ್ಟು ಗಿಡಗಂಟಿಗಳು ಬೆಳೆದಿದ್ದು, ಇದರಿಂದ ನೀರು ಸರಾಗವಾಗಿ ನಿಗದಿತ ಗುರಿ ತಲುಪಲು ಸಾಧ್ಯವಾಗದೇ ಇರುವುದರಿಂದ ಆಧ್ಯತೆಯ ಮೇಲೆ ಗಿಡಗಂಟಿಗಳನ್ನು ಸ್ವಚ್ಚಗೊಳಿಸಲು ಸೂಚಿಸಿದರು.

ಅದಕ್ಕೆ ಜಿ.ಎಲ್.ಬಿ.ಸಿ. ಕಾರ್ಯನಿರ್ವಾಹಕ ಅಭಿಯಂತರರು, ಜಮಖಂಡಿ ರವರು ಇಲಾಖೆಯಲ್ಲಿ ನಿಗದಿತ ಅನುದಾನ ಸೀಮಿತ ಇರುವುದರಿಂದ ಗುರಿ ನಿಗದಿ ಪಡಿಸಿದ ಕಾಲುವೆಗಳನ್ನು ಮಾತ್ರ ಸ್ವಚ್ಛಗೊಳಿಸಲಾಗುವುದೆಂದು ವಿವರಿಸಿದರು.

ಅಧ್ಯಕ್ಷರು, ಇಂತಹ ಕಾಮಗಾರಿಗಳನ್ನು ನರೇಗಾ ಯೋಜನೆಯಡಿ ಕಾಲುವೆ ಸ್ವಚ್ಛಗೊಳಿಸಲು ತಿಳಿಸಿದರು.

ಜಿಲ್ಲಾಧಿಕಾರಿಗಳು, ಜಿ.ಎಲ್.ಬಿ.ಸಿ. ಕಾಲುವೆಗೆ ಬಿಡುಗಡೆಗೊಳಿಸಿದ ನೀರನ್ನು ನಿಗದಿತ ಗುರಿ ತಲುಪುವಂತೆ ಕಾಲುವೆಗಳ ಟ್ರೀ ಮ್ಯಾಪ್‌ಗಳನ್ನು ಸಿದ್ದಪಡಿಸಿಕೊಂಡಿದ್ದು, ಹಲವು ಸಭೆಗಳನ್ನು ತಗೆದುಕೊಂಡು ಶತಗತಾಯ ಕಾಲುವೆಗಳಿಗೆ ನೀರು ಹರಿಯುವಂತೆ ಯೋಜನೆಯನ್ನು ರೂಪಿಸಿ, ನಿರಂತರ ಶ್ರಮವಹಿಸಿ, ಉಪವಿಭಾಗಾಧಿಕಾರಿಗಳು, ಜಮಖಂಡಿ ಇವರ ನೇತೃತ್ವದಲ್ಲಿ ಎರಡು ಜನ ಕಾ.ನಿ.ಅಭಿಯಂತರರ ನಿರಂತರ ಪ್ರಯತ್ನದಿಂದ ಒಟ್ಟು 13 ಕೆರೆಗಳನ್ನು ಶೇಕಡಾ 30 ರಿಂದ 50 ರಷ್ಟು ನೀರು ಹರಿಸಲಾಗಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಯಶಸ್ವಿಯಾಗಿ ನೀರು ಗುರಿ ತಲುಪಿಸಿ, ಕೆರೆಗಳಿಗೆ ನೀರು ಹರಿಸಿರುವ ಕುರಿತು ಜಿಲ್ಲಾಡಳಿತ ಕೈಕೊಂಡ ಕ್ರಮಗಳ ಕುರಿತು ಶ್ಲಾಘನೆ ವ್ಯಕ್ತಪಡಿಸಿ ಎಲ್ಲ ಸದಸ್ಯರಿಗೆ ಸಭೆಯಲ್ಲಿ ಅಭಿನಂದನೆಗಳನ್ನು ತಿಳಿಸಿದರು.

**ಜಿ.ಆರ್.ಬಿ.ಸಿ. ಕಾಲುವೆ:**

ಪ್ರಸ್ತುತ ಜಿ.ಆರ್.ಬಿ.ಸಿ. ಕಾಲುವೆಗೆ ಬಿಡುಗಡೆಗೊಳಿಸಿದ ನೀರು ದಿನಾಂಕ: 20-04-2019 ರಂದು ಮುಂಜಾನೆ 09-00 ಗಂಟೆಯ ಸುಮಾರಿಗೆ ಇನ್ನೂ 118 ಕಿ.ಮೀ.ಗೆ ತಲುಪಿದ್ದು, ಜಿಲ್ಲೆಯ ಸರಹದ್ದು 119 ಕಿ.ಮೀ. ರಿಂದ ಪ್ರಾರಂಭವಾಗುತ್ತಿದೆ. ಕಾರಣ ಇನ್ನೂ ನೀರು ಜಿಲ್ಲೆಯ ಗಡಿಭಾಗಕ್ಕೆ ತಲುಪಿರುವುದಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು, ಜಿ.ಆರ್.ಬಿ.ಸಿ. ಬಾಗಲಕೋಟೆ ಇವರು ಸಭೆಗೆ ವಿವರಿಸಿದರು.

ಮುಂದುವರೆದು ಅಧ್ಯಕ್ಷರು ಮಾತನಾಡುತ್ತ, ನೀರು ಜಿಲ್ಲೆಯ ಗಡಿಭಾಗಕ್ಕೆ ತಲುಪಲು ಆಗಿರುವ ವಿಳಂಬದ ಕುರಿತು ವಿವರಣೆ ಒದಗಿಸಲು ಸೂಚಿಸಿದರು. ಕಾರ್ಯನಿರ್ವಾಹಕ ಅಭಿಯಂತರರು, ದಿನಾಂಕ: 19-04-2019 ರಂದು ತಹಶೀಲ್ದಾರ ಮುಧೋಳ ಇವರೊಂದಿಗೆ ಜಿ.ಆರ್.ಬಿ.ಸಿ. ಕಾಲುವೆಯ 78 ಕಿ.ಮೀ. ರವರೆಗೆ ಬೆಳಗಾವಿ ಜಿಲ್ಲೆಯಲ್ಲಿ ಸ್ಥಳ ಸಮೀಕ್ಷೆ ಕೈಕೊಂಡಿದ್ದು, ಸದರಿ ಸಂದರ್ಭದಲ್ಲಿ ಈಗಾಗಲೇ ಬಿಡುಗಡೆಗೊಳಿಸಿದ ನೀರು ಬೆಳಗಾವಿ ಜಿಲ್ಲೆಯಲ್ಲಿ ಕೆಲವೊಂದು ವಿತರಣಾ ಕಾಲುವೆಗಳ ಮೂಲಕ ನೀರು ಬಳಕೆಮಾಡಿಕೊಳ್ಳುತ್ತಿರುವದು ಕಂಡು ಬಂದಿದೆ ಇದರಿಂದ ನಮ್ಮ ಜಿಲ್ಲೆಯ ಗಡಿಭಾಗಕ್ಕೆ ನೀರು ತಲುಪಿರುವುದಿಲ್ಲವೆಂದು ತಿಳಿಸಿದರು.

ಅಧ್ಯಕ್ಷರು, ಈ ಬಗ್ಗೆ ಸಭೆಯಲ್ಲಿಯೇ ಮುಖ್ಯ ಅಭಿಯಂತರರು, ನೀರಾವರಿ ಉತ್ತರ ವಲಯ ಬೆಳಗಾವಿ ಇವರೊಂದಿಗೆ ದೂರವಾಣಿ ಮುಖೇನ ಸಂಪರ್ಕಿಸಿ, ನೀರು ನಿಗದಿತ ಗುರಿಯಾದ ಬಾಗಲಕೋಟೆ ಜಿಲ್ಲೆಯ 159 ಕಿ.ಮೀ. ತಲುಪಬೇಕಾಗಿರುವುದರಿಂದ ಬೆಳಗಾವಿ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಹಾಗೂ ಬಾಗಲಕೋಟೆ ಜಿಲ್ಲೆಯ ಪಾಲಿನ ನೀರನ್ನು ಬಾಗಲಕೋಟೆ ಜಿಲ್ಲೆಗೆ ಒದಗಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು.

ಜಿಲ್ಲಾಧಿಕಾರಿಗಳು, ನೀರಿನ ವೇಗ ಅಳೆಯುವ ಮಾಪಕವನ್ನು ಸಣ್ಣ ನೀರಾವರಿ ಇಲಾಖೆಯಿಂದ ಪಡೆದು ಜಿ.ಆರ್.ಬಿ.ಸಿ. ಕಾಲುವೆಗೆ ಅಳವಡಿಸಿ ವರದಿ ಸಲ್ಲಿಸಲು ಕ್ರಮವಹಿಸಲಾಗಿದೆ ಇದರಿಂದ ಜಿಲ್ಲೆಗೆ ಬರುವ ನೀರಿನ ಪ್ರಮಾಣ ಲಭ್ಯವಾಗುವುದೆಂದು ಸಭೆಗೆ ವಿವರಿಸಿದರು.

**ಟಿಟಿಎಫ್-1 ಮತ್ತು 2 ರ ಕ್ರಿಯಾ ಯೋಜನೆ ಕುರಿತು:**

ಅಧ್ಯಕ್ಷರು, ಟಿಟಿಎಫ್-1 ಮತ್ತು 2 ರ ಕ್ರಿಯಾ ಯೋಜನೆಯನ್ವಯ ಕೈಗೊಂಡ ಕಾಮಗಾರಿಗಳ ವಿವರವನ್ನು ಒದಗಿಸಲು ಕಾರ್ಯನಿರ್ವಾಹಕ ಅಭಿಯಂತರರಿಗೆ ಒದಗಿಸಲು ಸೂಚಿಸಿದರು.

ಕಾರ್ಯನಿರ್ವಾಹಕ ಅಭಿಯಂತರರು, ಟಿಟಿಎಫ್-1 ಅಡಿ 210 ಕಾಮಗಾರಿಯನ್ನು ಕೈಗೊಂಡಿದ್ದು, ಇಲ್ಲಿಯವರೆಗೆ ಕೇವಲ 121 ಕಾಮಗಾರಿಗಳನ್ನು ಪೂರ್ಣಗೊಂಡಿರುತ್ತವೆ. ಹಾಗೂ ಟಿಟಿಎಫ್-2 ಅಡಿ 203 ಕಾಮಗಾರಿಗಳನ್ನು ಕೈಗೊಂಡಿದ್ದು, ಕೇವಲ 23 ಕಾಮಗಾರಿಗಳ ಪೂರ್ಣಗೊಂಡಿರುತ್ತವೆ ಎಂದು ಸಭೆಗೆ ವಿವರಿಸಿದರು.

ಟಿಟಿಎಫ್-1 ಮತ್ತು 2 ರಡಿ 413 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, 144 ಕಾಮಗಾರಿಗಳನ್ನು ಮಾತ್ರ ಮುಕ್ತಾಗೊಳಿಸಿದ್ದು, ಇನ್ನೂ 269 ಕಾಮಗಾರಿಗಳು ಪ್ರಗತಿ ಹಂತದಲ್ಲಿ ಇರುವ ಬಗ್ಗೆ ಅಧ್ಯಕ್ಷರು, ಕಾಮಗಾರಿ ಮುಕ್ತಾಯದ ಬಗ್ಗೆ ಅಸಮಾದಾನ ವ್ಯಕ್ತಪಡಿಸಿ, ನಿಮ್ಮ ಪ್ರಗತಿ ಪ್ರತಿಶತ 34.8 ರಷ್ಟು ಮಾತ್ರ ಇದ್ದು ಈಗಾಗಲೇ ಬೇಸಿಗೆ ಮಧ್ಯದಲ್ಲಿದ್ದು, ಬಾಕಿ ಉಳಿದ 269 ಕಾಮಗಾರಿಗಳನ್ನು ಎಪ್ರಿಲ್ ಅಂತ್ಯದೊಳಗಾಗಿ ಮುಕ್ತಾಯಗೊಳಿಸಿ, ಸಾರ್ವಜನಿಕರಿಗೆ ನೀರು ಪೂರೈಕೆ ಮಾಡಲು ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಾಗಲಕೋಟೆ ಇವರು ಇದಕ್ಕೆ ಪ್ರತಿಕ್ರಯಿಸುತ್ತ, ಸಹಾಯಕ ಅಭಿಯಂತರರುಗಳ ಕೊರತೆಯಿಂದಾಗಿ ಕಾರ್ಯದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿಯಾಗುತ್ತಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಪ್ರಾದೇಶಿಕ ಆಯುಕ್ತರು ಈ ಸಂದರ್ಭದಲ್ಲಿ ಈ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕೆ.ಆರ್.ಐ.ಡಿ.ಎಲ್ ಅಥವಾ ಗ್ರಾಮ ಪಂಚಾಯತಿಗಳಿಗೆ ವಹಿಸಿ ಅನುಷ್ಠಾನಗೊಳಿಸುವ ಪರ್ಯಾಯ ವ್ಯವಸ್ಥೆಯ ಕುರಿತು ಪರಿಶೀಲಿಸಲು ಸೂಚಿಸಲಾಯಿತು.

TTF-3 ರಡಿ ಜಿಲ್ಲೆಗೆ ರೂ. 300.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರಿಗೆ ಕ್ರಿಯಾ ಯೋಜನೆ ಅನುಮೋದನೆ ನೀಡಿರುವ ಬಗ್ಗೆ ವಿವರಣೆ ಒದಗಿಸಲು ಅಧ್ಯಕ್ಷರು, ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರು ಕಾ.ನಿ.ಅಭಿಯಂತರರು, RWS ಇಲಾಖೆ ರವರು ತಯಾರಿಸಿದ ಕ್ರಿಯಾ ಯೋಜನೆಯನ್ನು ಪುನರ್ ಪರಿಶೀಲಿಸಿ, ಪರಿಷ್ಕೃತವಾಗಿ ಮಾರ್ಪಾಡು ಮಾಡಿ ಟಿಟಿಎಫ್-3 ಯ ಕ್ರಿಯಾ ಯೋಜನೆಯನ್ನು ದಿನಾಂಕ: 19-04-2019 ರಂದು ಅನುಮೋದನೆ ನೀಡಲಾಗಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಟಿಟಿಎಫ್-3 ರಡಿ ಹೊಂದಾಣಿಕೆಯಾಗಿ ಅನುದಾನ ಉಪಯೋಗಿಸಿರುವ ಬಗ್ಗೆ ವಿವರಣೆ ಒದಗಿಸಲು ಸೂಚಿಸಿದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಾಗಲಕೋಟೆ ರವರು ಯಾವುದೇ ಹೊಂದಾಣಿಕೆ ಅನುದಾನವನ್ನು ಉಪಯೋಗಿಸದೇ ಟಿಟಿಎಫ್-3 ರಡಿ ಅನುದಾನಕ್ಕೆ ಮಾತ್ರ ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಟಿಟಿಎಫ್-1 ಮತ್ತು ಟಿಟಿಎಫ್-2 ರ ಮಾದರಿಯಲ್ಲಿ ಹೊಂದಾಣಿಕೆ ಅನುದಾನವನ್ನು ಬಳಕೆ ಮಾಡಿ ಕ್ರಿಯಾ ಯೋಜನೆಯನ್ನು ಪುನರ್ ಪರಿಶೀಲಿಸುವಂತೆ ಸೂಚಿಸಿದರು ಮತ್ತು ಕ್ರಿಯಾ ಯೋಜನೆಯನ್ನು ಅನುಮೋದಿಸುವಾಗ ಒಂದು ಕಾಮಗಾರಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಹೊಂದಿರುವ ಅಂದಾಜು ಪತ್ರಿಕೆ ಸಿದ್ಧಪಡಿಸಿ ಅನುಮೋದಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರು ಮುಂಬರುವ ತಿಂಗಳಿನಲ್ಲಿ 65 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಪ್ರಾದೇಶಿಕ ಆಯುಕ್ತರು, ಗುರುತಿಸಲಾದ 65 ಗ್ರಾಮಗಳಲ್ಲಿ ಸಿ.ಆರ್.ಎಫ್ ಅನುದಾನವನ್ನು ಬಳಸಿಕೊಂಡು ಯಾವುದೇ ರೀತಿಯ ಸಮಸ್ಯೆ ಉಂಟಾಗದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

**ಕುಡಿಯುವ ನೀರು ಪೂರೈಕೆ : ನಗರ ಪ್ರದೇಶ :-**

ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಇವರು ಪ್ರಸ್ತುತ ಜಿಲ್ಲೆಯಲ್ಲಿ 15 ನಗರ ಸ್ಥಳಿಯ ಸಂಸ್ಥೆಗಳ ಪೈಕಿ ಒಟ್ಟು 362 ವಾರ್ಡಗಳಿದ್ದು, ಯಾವುದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಸ್ತುತ ಟ್ಯಾಂಕರ್ ಮೂಲಕ ನೀರು ಪೂರೈಕೆ ಇರುವುದಿಲ್ಲವೆಂದು ಸಭೆಗೆ ವಿವರಿಸಿದರು.

ಅಧ್ಯಕ್ಷರು, ಒಟ್ಟಾರೆ ಎಷ್ಟು ನಗರ ಸ್ಥಳಿಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಹಾಗೂ ಕೃಷ್ಣಾ ನದಿಗೆ ಅವಲಂಬಿತವಾಗಿರುವ ನಗರ ಪಟ್ಟಣ ಪ್ರದೇಶಗಳು ಯಾವವು ಇಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಯಾವ ಕ್ರಮಗಳನ್ನು ಕೈಗೊಂಡಿರುತ್ತಿರಿ ಎಂದು ವಿವರಣೆ ಒದಗಿಸಲು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಇವರಿಗೆ ಸೂಚಿಸಿದರು.

ಯೋಜನಾ ನಿರ್ದೇಶಕರು, ಒಟ್ಟು ಕೆರೂರ, ರಬಕವಿ-ಬನಹಟ್ಟಿ ಹಾಗೂ ತೇರದಾಳ ಪುರಸಭೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಸ್ಥಳಿಯ ಸಂಪನ್ಮೂಲಗಳಾದ ಕೊಳವೆಬಾವಿಗಳನ್ನು ಉಪಯೋಗಿಸಿಕೊಂಡು ನೀರು ಪೂರೈಕೆ ಮಾಡಿ ಪ್ರಸ್ತುತ ಸಮಸ್ಯೆಯನ್ನು ನಿವಾರಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ಕೃಷ್ಣಾ ನದಿಗೆ ಜಮಖಂಡಿ, ರಬಕವಿ-ಬನಹಟ್ಟಿ ಹಾಗೂ ತೇರದಾಳ ಪುರಸಭೆಗಳು ಕುಡಿಯುವ ನೀರಿಗೆ ಅವಲಂಬಿತವಾಗಿದ್ದು, ರಬಕವಿ-ಬನಹಟ್ಟಿ ಪಟ್ಟಣದಲ್ಲಿ 115 ಖಾಸಗಿ ಕೊಳವೆಬಾವಿಗಳನ್ನು ಗುರುತಿಸಿ, ಕರಾರು ಒಪ್ಪಂದ ಮಾಡಿಕೊಂಡಿದ್ದು, ಇದರಲ್ಲಿ 28 ಖಾಸಗಿ ಕೊಳವೆಬಾವಿಗಳನ್ನು ಕೇವಲ ವಿದ್ಯುತ್ ಬಿಲ್ ಹಾಗೂ ಕೊಳವೆ ಬಾವಿಗಳು ದುರಸ್ತಿಯಾದಲ್ಲಿ ಅವುಗಳನ್ನು ಸರಿಪಡಿಸಿಕೊಡುವ ಕರಾರಿನೊಂದಿಗೆ ಈಗಾಗಲೇ ಉಪಯೋಗಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ತೇರದಾಳ ಪುರಸಭೆ ವ್ಯಾಪ್ತಿಯಲ್ಲಿ 54 ಕೊಳವೆಬಾವಿಗಳು, 11 ಕೈ ಪಂಪ್‌ಗಳು ಕಾರ್ಯನಿರ್ವಹಿಸುತ್ತವೆ. ರಬಕವಿ-ಬನಹಟ್ಟಿ ಪಟ್ಟಣದಲ್ಲಿ 16 ತೆರದ ಬಾವಿಗಳನ್ನು ಸ್ವಚ್ಛಗೊಳಿಸಿದ್ದು, ಇದರಿಂದ ನೀರು ಪೂರೈಕೆ ಮಾಡಲಾಗುತ್ತಿದೆ.

ಕೆರೂರ ಪಟ್ಟಣ ಪಂಚಾಯತಿಯಲ್ಲಿ 36 ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿದ್ದು, ಅವಶ್ಯಕತೆ ಅನುಗುಣವಾಗಿ ಹೊಸ ಕೊಳವೆಬಾವಿಗಳನ್ನು ಕೊರೆದು ತುರ್ತು ನೀರು ಪೂರೈಕೆ ಮಾಡಲಾಗುವುದೆಂದು ಸಭೆಗೆ ವಿವರಿಸಿದರು.

ಅಧ್ಯಕ್ಷರು, ಒಟ್ಟಾರೆ ನಗರ ಸ್ಥಳಿಯ ಸಂಸ್ಥೆಗಳಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಆಧ್ಯತೆಯ ಮೇಲೆ ಅವಶ್ಯಕತೆ ಕಂಡು ಬಂದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

**ಮೇವು ಪೂರೈಕೆ ವಿವರ:-**

ಜಿಲ್ಲೆಯಲ್ಲಿ ಜನವರಿ ಮತ್ತು ಫೆಬ್ರವರಿ-2019 ರ ಮಾಹೆಯಲ್ಲಿ ಮೇವಿನ ಸಮೀಕ್ಷೆ ಜೊತೆಗೆ ಜಾನುವಾರುಗಳ ಸಮೀಕ್ಷೆಯನ್ನು ಸಹ ಕೈಗೊಂಡಿದ್ದು, ಸದರಿ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ 4,65,563 ಜಾನುವಾರುಗಳು ಇದ್ದು, 1,70,571 ಮೇ.ಟನ್ ಮೇವು ಲಭ್ಯವಿದೆ. ಈ ಮೇವು ಮುಂದಿನ 10 ವಾರಗಳಿಗೆ ಪೂರೈಸಬಹುದೆಂದು ಸಭೆಗೆ ವಿವರಿಸಿದರು.

ಸರ್ಕಾರದಿಂದ ಮೇವಿನ ಬೀಜದ 32431 ಕಿರುಪೊಟ್ಟಣಗಳು ಪೂರೈಕೆಯಾಗಿದ್ದು, ಇವುಗಳನ್ನು ನೀರಾವರಿ ಹೊಂದಿದ ರೈತರಿಗೆ ವಿತರಿಸಲಾಗಿದ್ದು, ಇದರಿಂದ ಅಂದಾಜು 32431 ಮೇ.ಟನ್ ಹಸಿಮೇವು

ಉತ್ಪಾದನೆಯಾಗುವ ನೀರಿಕ್ಷೆ ಇದ್ದು ಇದರಿಂದ ರೈತರು ತಮ್ಮಲ್ಲಿರುವ ಸರಾಸರಿ 5-6 ಜಾನುವಾರುಗಳಿಗೆ 6 ವಾರಗಳವರೆಗೆ ಉಪಯೋಗಿಸಬಹುದಾಗಿದೆ.

ಮುಂಬರುವ ದಿನಗಳಲ್ಲಿ ಮೇವಿನ ಸಮಸ್ಯೆ ಉಂಟಾದಲ್ಲಿ ಮೇವು ಸರಬರಾಜು ಕುರಿತು ಟೆಂಡರ್ ಪ್ರಕ್ರಿಯೇ ಕೈಗೊಂಡಿದ್ದು, ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಿ ದರ ನಿಗದಿ ಪಡಿಸಲಾಗಿದೆ. ಅವಶ್ಯಕ ಅನುಗುಣವಾಗಿ ಬಿಡ್‌ದಾರರಿಂದ ಮೇವು ಖರೀದಿಸಲು ಕ್ರಮವಹಿಸಲಾಗುವುದು.

ಈಗಾಗಲೇ ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲು 6 ತಾಲ್ಲೂಕುಗಳಲ್ಲಿ ಸ್ಥಳ ಗುರುತಿಸಲಾಗಿದೆ. ಅವಶ್ಯಕತೆಗೆ ಅನುಗುಣವಾಗಿ ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುವುದು. ಪ್ರಸ್ತುತ ಬದಾಮಿ ಹಾಗೂ ಬಾಗಲಕೋಟೆ ತಾಲ್ಲೂಕುಗಳಲ್ಲಿ ಬಫರ್ ಸ್ಟಾಕ್ ಕಾಯ್ದಿರಿಸಲಾಗಿದೆ ಎಂದು ಸಭೆಗೆ ಉಪ ನಿರ್ದೇಶಕರು, ಪಶುಪಾಲನೆ ಇವರು ವಿವರಿಸಿದರು.

**<u>ಎಮ್.ಎನ್.ಆರ್.ಇ.ಜಿ.ಎ. :-</u>**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರು 2019-20 ನೇ ಸಾಲಿನಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಮಾನವದಿನಗಳ ಸೃಜನೆ ಗುರಿಯನ್ನು 37.00 ಲಕ್ಷ ಮಾನವ ದಿನಗಳಿಗೆ ಗುರಿ ನಿಗದಿಪಡಿಸಿದ್ದು, ಇದುವರೆಗೆ 1.28 ಲಕ್ಷ ಮಾನವ ದಿನಗಳ ಸೃಜನೆ ಮಾಡಲಾಗಿದೆ ಎಂದು ತಿಳಿಸಿದರು.

ಸಭಾಧ್ಯಕ್ಷರು 2019-20 ನೇ ಸಾಲಿನಲ್ಲಿ ನಿಗದಿಪಡಿಸಲಾದ ಗುರಿಯ ಪೈಕಿ ಶೇ. 40% ಅಂದರೆ 14.8 ಲಕ್ಷ ಮಾನವ ದಿನಗಳನ್ನು ಜನರಿಗೆ ಉದ್ಯೋಗದ ಅವಶ್ಯಕತೆ ಇರುವ ಅಂದರೆ ಎಪ್ರಿಲ್, ಮೇ ಹಾಗೂ ಜೂನ್ ತಿಂಗಳ ಅಂತ್ಯದೊಳಗೆ ಸೃಜಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಇದಲ್ಲದೇ ಜಿಲ್ಲೆಯ ಜನರು ಉದ್ಯೋಗವನ್ನು ಅರಸಿ ಬೇರೆ ಸ್ಥಳಗಳಿಗೆ ವಲಸೆ ಹೋಗದಂತೆ ಅಗತ್ಯವಾದ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಅಧ್ಯಕ್ಷರು, ಒಟ್ಟಾರೆ ಜಿಲ್ಲೆಯಲ್ಲಿ ಮೇವಿನ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ಉದ್ಯೋಗದ ಸಮಸ್ಯೆ ಉಂಟಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಂಡು, ಕ್ರಮವಹಿಸಲು ಕಟ್ಟು ನಿಟ್ಟಿನ ಸೂಚನೆಗಳನ್ನು ನೀಡಿದರು.

ಕೊನೆಯದಾಗಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ತುಷಾರ್ ಗಿರಿ ನಾಥ್)
ಪ್ರಾದೇಶಿಕ ಆಯುಕ್ತರು,
ಬೆಳಗಾವಿ ವಿಭಾಗ, ಬೆಳಗಾವಿ
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಾಗಲಕೋಟೆ

ಪ್ರತಿಯನ್ನು ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.

**ದಿನಾಂಕ:-18-04-2019 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲೆಯ ಬರ ಪರಿಸ್ಥಿತಿ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:**

ಹಾಜರಿದ್ದ ಅಧಿಕಾರಿಗಳು:

1) ಜಿಲ್ಲಾಧಿಕಾರಿಗಳು, ಬಳ್ಳಾರಿ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಳ್ಳಾರಿ.
3) ಸಹಾಯಕ ಆಯುಕ್ತರು, ಬಳ್ಳಾರಿ ಮತ್ತು ಹೊಸಪೇಟೆ.
4) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬಳ್ಳಾರಿ.
5) ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಳ್ಳಾರಿ.
6) ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬಳ್ಳಾರಿ.
7) ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ.ಸ.ಇಲಾಖೆ, ಬಳ್ಳಾರಿ.
8) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.
9) ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.
10) ಕಾರ್ಯನಿರ್ವಾಹಕ ಅಭಿಯಂತರರು, ಕೆ.ಯು.ಡಬ್ಲ್ಯು.ಎಸ್.ಡಿ., ಬಳ್ಳಾರಿ.
11) ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ (ಓ & ಎಮ್) ಗ್ರಾಮೀಣ ವಿಭಾಗ, ಬಳ್ಳಾರಿ ಮತ್ತು ಹೊಸಪೇಟೆ.
12) ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ (ಓ & ಎಮ್) ನಗರ ವಿಭಾಗ, ಬಳ್ಳಾರಿ ಮತ್ತು ಹೊಸಪೇಟೆ.
13) ತಹಶೀಲ್ದಾರರು, ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ, ಹ.ಬೊ.ಹಳ್ಳಿ, ಕೂಡ್ಲಿಗಿ, ಹರಪನಹಳ್ಳಿ ಮತ್ತು ಹಡಗಲಿ.
14) ಕಾರ್ಯನಿರ್ವಾಹಕ ಅಧಿಕಾರಿಗಳು, ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ, ಹ.ಬೊ.ಹಳ್ಳಿ, ಹರಪನಹಳ್ಳಿ, ಕೂಡ್ಲಿಗಿ ಮತ್ತು ಹಡಗಲಿ.
15) ಎಲ್ಲಾ ಪೌರಾಯುಕ್ತರು/ಮುಖ್ಯಾಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆಗಳು.

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಸಭೆ ನಡೆಸಿ ಕೊಡಲು ಕೋರಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ ಪ್ರಸ್ತುತ ಸ್ಥಿತಿ ಮತ್ತು ಈವರೆಗೆ ತೆಗೆದುಕೊಂಡ ಕ್ರಮದ ಬಗ್ಗೆ ವಿವರಿಸಲು ತಿಳಿಸಿದರು.

**ಕುಡಿಯುವ ನೀರಿನ ಪರಿಸ್ಥಿತಿ:-** ಜಿಲ್ಲಾಧಿಕಾರಿಗಳು ಮಾತನಾಡುತ್ತಾ,

- ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 35 ಗ್ರಾಮಗಳಲ್ಲಿ 58 ಖಾಸಗಿ ಟ್ಯಾಂಕರ್ ಮುಖಾಂತರ ಹಾಗೂ 222 ಖಾಸಗಿ ಬೋರ್‌ವೆಲ್‌ಗಳನ್ನು (174 ಗ್ರಾಮಗಳು) ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ವಿವರಿಸಿದರು.
- ಹರಪನಹಳ್ಳಿ ತಾಲ್ಲೂಕು ಹೊರತುಪಡಿಸಿ ಇನ್ನುಳಿದ 7 ತಾಲ್ಲೂಕುಗಳಲ್ಲಿ ಟ್ಯಾಂಕರ್ ಮತ್ತು ಖಾಸಗಿ ಬೋರ್‌ವೆಲ್‌ಗಳ ಮೂಲಕ ಸರಬರಾಜು ಮಾಡಿದ ಬಿಲ್ಲಿನ ಮೊತ್ತವನ್ನು ಮಾರ್ಚ್ 2019 ರವರೆಗೆ ಪಾವತಿ ಮಾಡಲಾಗಿದೆ ಎಂದು ತಿಳಿಸಿದರು.

- ಖಾಸಗಿ ಟ್ಯಾಂಕರ್‌ಗಳಿಗೆ ಈವರೆಗೆ ರೂ.40.21 ಲಕ್ಷ ಮತ್ತು ಖಾಸಗಿ ಬೋರ್‌ವೆಲ್‌ಗಳಿಗೆ ರೂ.47.06 ಲಕ್ಷಗಳ ಮೊತ್ತವನ್ನು ಪಾವತಿಸಲಾಗಿದೆ ಎಂದರು ತಿಳಿಸಿದರು.
- ನಗರ ಪ್ರದೇಶದಲ್ಲಿ ಯಾವುದೇ ವಾರ್ಡುಗಳಲ್ಲಿ ಖಾಸಗಿ ಟ್ಯಾಂಕರ್ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿಲ್ಲ ಎಂದು ತಿಳಿಸಿದರು. ಕೇವಲ ಬಳ್ಳಾರಿ ಮಹಾನಗರ ಪಾಲಿಕೆ ಮತ್ತು ಸಿರುಗುಪ್ಪ ನಗರಸಭೆಯಲ್ಲಿ ಸ್ಥಳೀಯ ಸಂಸ್ಥೆ ಟ್ಯಾಂಕರ್‌ಗಳನ್ನು ಅವಶ್ಯಕತೆಗೆ ಅನುಗುಣವಾಗಿ ಬಳಸಿ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಆರ್.ಡಿ.ಪಿ.ಆರ್. ಇಲಾಖೆಯಿಂದ ಟಿ.ಎಫ್.ಸಿ-1 & 2 ರಡಿ ಬಳ್ಳಾರಿ ಜಿಲ್ಲೆಗೆ ಒಟ್ಟು ರೂ.800.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸದರಿ ಮೊತ್ತಕ್ಕೆ ಒಟ್ಟು 509 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು. ಈವರೆಗೆ 418 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು ರೂ.242.00 ಲಕ್ಷಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಕುಡಿಯುವ ನೀರು ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

- ಹರಪನಹಳ್ಳಿ ತಾಲ್ಲೂಕಿನ ಜನವರಿಯಿಂದ ಮಾರ್ಚ್ ತಿಂಗಳಿನ ಬಿಲ್ಲುಗಳನ್ನು ಕೂಡಲೇ ಪಾವತಿಸಲು ಸೂಚಿಸಿದರು.
- ಟ್ಯಾಂಕರ್ ಮುಖಾಂತರ ಸರಬರಾಜು ಮಾಡುತ್ತಿರುವ ಪ್ರತಿ ಟ್ಯಾಂಕರ್‌ಗೆ ಜಿ.ಪಿ.ಎಸ್. ಅಳವಡಿಸಲು ಸೂಚಿಸಿದರು.
- ಕಳೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಂಬಂಧಪಟ್ಟ ಅಧಿಕಾರಿಗಳೂ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

**<u>ಮೇವಿನ ಪರಿಸ್ಥಿತಿ:-</u>**

ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಈ ಕೆಳಕಂಡಂತೆ ಜಿಲ್ಲೆಯಲ್ಲಿ ಮೇವಿನ ಪರಿತಿಸ್ಥಿತಿ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು,

- ಕೂಡ್ಲಿಗಿ ತಾಲ್ಲೂಕು ಗಂಡುಬೊಮ್ಮನಹಳ್ಳಿ ಗ್ರಾಮದಲ್ಲಿ ಗೋಶಾಲೆಯನ್ನು ತೆರೆಯಲಾಗಿದ್ದು, ಒಟ್ಟು 3231 ಜಾನುವಾರುಗಳು ಇವೆ ಎಂದು ತಿಳಿಸಿದರು. ಗೋಶಾಲೆಯಲ್ಲಿ ನೆರಳು, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಔಷದಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.
- ಸಂಡೂರು ತಾಲ್ಲೂಕಿನ ಯು.ರಾಜಾಪುರ, ವಿಠಲಾಪುರ ಮತ್ತು ಮೆಟ್ರಿಕಿ ಗ್ರಾಮಗಳಲ್ಲಿ ಮತ್ತು ಹ.ಬೊ.ಹಳ್ಳಿ ತಾಲ್ಲೂಕಿನ ಹ.ಬೊ.ಹಳ್ಳಿ ಗ್ರಾಮದಲ್ಲಿ ತಲಾ ಒಂದರಂತೆ ಒಟ್ಟು 04 ಮೇವು ಬ್ಯಾಂಕ್ ತೆರೆಯಲಾಗಿದೆ ಎಂದು ತಿಳಿಸಿದರು.
- ಈವರೆಗೆ ನೇರವಾಗಿ ರೈತರಿಂದ 760.37 ಮೆ.ಟನ್ ಮತ್ತು ಇ-ಟೆಂಡರ್ ಮುಖಾಂತರ 400.00 ಮೆ.ಟನ್ ಮೇವನ್ನು ಖರೀದಿಸಲಾಗಿದೆ ಎಂದು ತಿಳಿಸಿದರು.
- ಬಳ್ಳಾರಿ, ಸಂಡೂರು ಮತ್ತು ಕೂಡ್ಲಿಗಿ ತಾಲ್ಲೂಕಿನಲ್ಲಿ ಈ ಹಿಂದೆ ನೇರವಾಗಿ ರೈತರಿಂದ ಖರೀದಿ ಮಾಡಿದ ಮೇವಿನ ಬಿಲ್ಲನ್ನು ಪಾವತಿ ಮಾಡಲು ಬಾಕಿ ಇದೆ ಎಂದು ತಿಳಿಸಿದರು.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಮೇವು ನಿರ್ವಹಣೆ ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

1) ಬಳ್ಳಾರಿ, ಸಂಡೂರು ಮತ್ತು ಕೂಡ್ಲಿಗಿ ತಾಲ್ಲೂಕಿನಲ್ಲಿ ನೇರವಾಗಿ ರೈತರಿಂದ ಖರೀದಿಸಿದ ಮೇವಿನ ಬಿಲ್ಲುಗಳ ಮೊತ್ತವನ್ನು ಕೂಡಲೇ ಪಾವತಿಸಲು ಸೂಚಿಸಿದರು.

2) ಕಳೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಂಬಂಧಪಟ್ಟ ಅಧಿಕಾರಿಗಳೂ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

**ಮಹಾತ್ಮಗಾಂಧಿ ನರೇಗಾ ಯೋಜನೆ:-**

- 2019-20 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನಿಗದಿಪಡಿಸಿದ ಮಾನವ ದಿನಗಳ ಸೃಜನೆಯಲ್ಲಿ ದಿನಾಂಕ-18.04.2019 ರ ಅಂತ್ಯಕ್ಕೆ ಬಳ್ಳಾರಿ ಜಿಲ್ಲೆಯು 75.00 ಲಕ್ಷ ಮಾನವ ದಿನಗಳ ಗುರಿಗೆ ಅನುಗುಣವಾಗಿ 3.90 ಲಕ್ಷ ಸೃಜನೆ ಮಾಡಿ ಶೇ-4% ರಷ್ಟು ಪ್ರಗತಿ ಸಾಧಿಸಿ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯು ಮೊದಲನೇ ಸ್ಥಾನದಲ್ಲಿದೆ.
- ಪ್ರತಿ ದಿನ ಜಿಲೆಯಲ್ಲಿ 84000 ಜನ ಕೆಲಸ ನಿರ್ವಹಿಸುತ್ತಿದ್ದು, ರಾಜ್ಯದಲ್ಲಿ ಅತೀ ಹೆಚ್ಚು ಕೆಲಸ ನೀಡಿದ ಜಿಲ್ಲೆಗಳಲ್ಲಿ ಮೊದಲನೇ ಸ್ಥಾನದಲ್ಲಿದೆ.
- ರೈತರಿಗೆ ಅನುಕೂಲವಾಗುವಂತೆ ಹಾಗೂ ಅಂತರ್ಜಲ ಹೆಚ್ಚಿಸುವ ಕಾಮಗಾರಿಗಳಾದ ಕಂದಕಬದು ನಿರ್ಮಾಣ ಮತ್ತು ಕೃಷಿ ಹೊಂಡ ಹಾಗೂ ರೈತರ ಹೊಲಗಳಲ್ಲಿನ ಬೋರ್‌ವೆಲ್‌ಗಳಿಗೆ ರೀಚಾರ್ಜ್ ಪಿಟ್‌ಗಳು ಮತ್ತು ಮಳೆಗಾಲ ಪ್ರಾರಂಭವನಾದ ನಂತರ ಗಿಡಗಳನ್ನು ನೆಡಲು ರಸ್ತೆ ಬದಿಯಲ್ಲಿ ಶಾಲಾ ಕಾಲೇಜು ಆವರಣಗಳಲ್ಲಿ ಮತ್ತು ರೈತರ ಹೊಲಗಳಲ್ಲಿ ಮುಂಗಡ ಗುಂಡಿ ತೆರೆಯುವ ಕಾರ್ಯ ಪ್ರಗತಿಯಲ್ಲಿದೆ

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಮಹಾತ್ಮ ಗಾಂಧಿ ನರೇಗಾ ಯೋಜನೆ ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

- ಇನ್ನು ಜನರಿಗೆ ವಲಸೆ ಹೋಗದಂತೆ ಹೆಚ್ಚಿನ ಕಾಮಗಾರಿಗಳನ್ನು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೈಗೆತ್ತಿಕೊಳ್ಳಲು ಸೂಚಿಸಿದರು.
- ಕಳೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಂಬಂಧಪಟ್ಟ ಅಧಿಕಾರಿಗಳೂ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ,
ಬಳ್ಳಾರಿ.

**ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 20-04-2019 ರಂದು ಮುಂಜಾನೆ 11-00 ಗಂಟೆಗೆ, ಬಾಗಲಕೋಟೆ ಜಿಲ್ಲೆಯ ಬರಪರಿಸ್ಥಿತಿ ನಿರ್ವಹಣೆ ಕುರಿತು ಜರುಗಿದ ಸಭೆಯ ನಡುವಳಿಗಳು:**

-*-*-*-*-

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಜಿಲ್ಲಾಧಿಕಾರಿಗಳು, ಬಾಗಲಕೋಟೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಬಾಗಲಕೋಟೆ
3. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಬಾಗಲಕೋಟೆ
4. ಉಪ ಕಾರ್ಯದರ್ಶಿಗಳು,ಜಿಲ್ಲಾ ಪಂಚಾಯತ್ ಬಾಗಲಕೋಟೆ
5. ಮುಖ್ಯ ಅಭಿಯಂತರರು,ಬಿಟಿಡಿಎ ಬಾಗಲಕೋಟೆ [ ಪ್ರತಿನಿಧಿ ]
6. ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಬಾಗಲಕೋಟೆ
7. ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಬಾಗಲಕೋಟೆ
8. ಉಪನಿರ್ದೇಶಕರು, ಪಶು ಪಾಲನಾ ಮತ್ತು ಪಶು ಸಂಗೋಪನಾ ಇಲಾಖೆ ಬಾಗಲಕೋಟೆ
9. ಕಾರ್ಯನಿರ್ವಾಹಕ ಅಧಿಕಾರಿಗಳು,ತಾ.ಪಂ.ಬಾಗಲಕೋಟ/ಬದಾಮಿ/ಹುನಗುಂದ/ಜಮಖಂಡಿ/ ಮುಧೋಳ/ಬೀಳಗಿ
10. ಉಪವಿಭಾಗಾಧಿಕಾರಿಗಳು, ಬಾಗಲಕೋಟೆ/ಜಮಖಂಡಿ
11. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬಾಗಲಕೋಟೆ (ಎಲ್ಲ ಕಾ.ನಿ.ಅಭಿಯಂತರರೊಂದಿಗೆ)
12. ಕಾರ್ಯನಿರ್ವಾಹಕ ಅಭಿಯಂತರರು, RWS & D ಬಾಗಲಕೋಟೆ (ಎಲ್ಲ ಸ.ಕಾ.ನಿ ಅಬಿಯಂತರರೊಂದಿಗೆ)
13. ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ವಿಜಯಪುರ (ಎಲ್ಲ ಸ.ಕಾ.ನಿ ಅಭಿಯಂತರರೊಂದಿಗೆ)
14. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ
15. ಕಾರ್ಯನಿರ್ವಾಹಕ ಅಭಿಯಂತರರು, ಜಿ ಎಲ್ ಬಿ ಸಿ ಜಮಖಂಡಿ, ಬೀಳಗಿ
16. ಕಾರ್ಯನಿರ್ವಾಹಕ ಅಭಿಯಂತರರು, ಜಿ ಆರ್ ಬಿ ಸಿ ಬಾಗಲಕೋಟೆ
17. ಜಿ ಎಲ್ ಬಿ ಸಿ,ಜಿ ಆರ್ ಬಿ ಸಿ ನೋಡಲ್ ಅಧಿಕಾರಿಗಳು
18. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಮಾಜಿಕ ವಲಯ ಬಾಗಲಕೋಟೆ
19. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಲಯ ಬಾಗಲಕೋಟೆ [ ಪ್ರತಿ ನಿಧಿ ]

ಅಪರ ಜಿಲ್ಲಾಧಿಕಾರಿಗಳು, ಸಭೆಗೆ ಆಗಮಿಸಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಅನುಮತಿ ಕೋರಿ ಸಭೆಯನ್ನು ಪ್ರಾರಂಭಿಸಿದರು.

ಪ್ರಾರಂಭದಲ್ಲಿ ಹಿಂದಿನ ಸಭೆಯಲ್ಲಿ ನೀಡಲಾದ ನಿರ್ದೇಶನಗಳ ಬಗ್ಗೆ ಅನುಸರಣಾ ವರದಿಯನ್ನು ಪರಿಶೀಲಿಸಲಾಯಿತು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಹಿಂದಿನ ಸಭೆಯಲ್ಲಿ ನೀಡಲಾದ ನಿರ್ದೇಶನಗಳನ್ನು ಅನುಸರಣೆ ಮಾಡದೇ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಈ ಕೆಳಕಂಡ ಅಂಶಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

**ಕುಡಿಯುವ ನೀರು ಪೂರೈಕೆ : ಗ್ರಾಮೀಣ ಪ್ರದೇಶ :-**

ಮಾನ್ಯ ಅಧ್ಯಕ್ಷರು, ಸಭೆಯ ಪ್ರಾರಂಭದಲ್ಲಿ ಮಹಾರಾಷ್ಟ್ರ ರಾಜ್ಯದ ಕೋಯ್ನಾ ಜಲಾಯದಿಂದ ನೀರು ಬಿಡುಗಡೆ ಕುರಿತು ಇನ್ನೂ ಸ್ಪಷ್ಟ ಆದೇಶಗಳು ಇರುವುದಿಲ್ಲ ಕಾರಣ ಕೃಷ್ಣಾ ನದಿಗೆ ನೀರು ಬಾರದೇ ಇದ್ದಲ್ಲಿ ಜೂನ್-2019 ರ ವರೆಗೆ ಗ್ರಾಮೀಣ ಪ್ರದೇಶದಲ್ಲಿ ಕೃಷ್ಣಾ ನದಿ ನೀರಿಗೆ ಅವಲಂಬಿತವಾಗಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಯಾವ ಕ್ರಮವಹಿಸಲಾಗಿದೆ ಹಾಗೂ ಎಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ ಎಂಬುದರ ಕುರಿತು ವಿವರಣೆ ಒದಗಿಸಲು ಕಾರ್ಯ ನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ ಇವರಿಗೆ ಸೂಚಿಸಿದರು.

ಕಾರ್ಯ ನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ ಇವರು ಜಿಲ್ಲೆಯಲ್ಲಿ ಕೃಷ್ಣಾ ನದಿಗೆ
ಜಮಖಂಡಿ ತಾಲ್ಲೂಕಿನಲ್ಲಿ 6 ಎಂವ್ಹಿಎಸ್ ಯೋಜನೆಯಡಿ 29 ಗ್ರಾಮಗಳು
ಹುನಗುಂದ ತಾಲ್ಲೂಕಿನಲ್ಲಿ 4 ಎಂವ್ಹಿಎಸ್ ಯೋಜನೆಯಡಿ 86 ಗ್ರಾಮಗಳು
ಬಾಗಲಕೋಟೆ ತಾಲ್ಲೂಕಿನಲ್ಲಿ 5 ಎಂವ್ಹಿಎಸ್ ಯೋಜನೆಯಡಿ 45 ಗ್ರಾಮಗಳು ಬರುತ್ತವೆ ಎಂದು ವಿವರಣೆ ಒದಗಿಸಿದರು.

ಅಧ್ಯಕ್ಷರು, ಆಲಮಟ್ಟಿ ಜಲಾಶಯದಿಂದ ಮತ್ತು ನಾರಾಯಣಪೂರ ಜಲಾಶಯದ ಹಿನ್ನೀರಿನಿಂದ ಕುಡಿಯುವ ನೀರಿಗೆ ಅವಲಂಭಿತವಾಗಿರುವ ಗ್ರಾಮಗಳಲ್ಲಿ ಹಿನ್ನೀರು ಲಭ್ಯವಿರುವದರಿಂದ ಕುಡಿಯುವ ನೀರಿನ ಸಮಸ್ಯೆ ಇರುವ ಬಗ್ಗೆ ಕೇಳಿದಾಗ ಕಾರ್ಯ ನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬಾಗಲಕೋಟೆ ಇವರು ಈ ಎರಡು ಜಲಾಶಯಗಳಿಗೆ ಸಂಬಂಧಿಸಿದಂತೆ, ಜಲಾಶಯಗಳಲ್ಲಿ ನೀರು ಲಭ್ಯವಿರುವದರಿಂದ ಹುನಗುಂದ, ಹಾಗೂ ಬಾಗಲಕೋಟೆ ತಾಲ್ಲೂಕುಗಳಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲವೆಂದು ವಿವರಿಸಿದರು.

ಅಧ್ಯಕ್ಷರು, ಜಮಖಂಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಗೆ ಅವಲಂಭಿತ ಇರುವ ಎಂವ್ಹಿಎಸ್ ಯೋಜನೆವಾರು ವಿವರಣೆ ಹಾಗೂ ಅವುಗಳಿಗೆ ಪರ್ಯಾಯ ವ್ಯವಸ್ಥೆ ಒದಗಿಸುವ ಕುರಿತು ಕೈಗೊಂಡಿರುವ ತಯಾರಿ ಕುರಿತು ವಿವರಣೆ ಒದಗಿಸಲು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಪವಿಭಾಗ ಜಮಖಂಡಿ ಇವರು 6 ಯೋಜನೆಗಳ ಪೈಕಿ

1. ಜಕನೂರ ಮತ್ತು ಇತರೆ 6 ಗ್ರಾಮಗಳು

ಲಭ್ಯವಿರುವ ಕೊಳವೆಬಾವಿಗಳಿಂದ ಹಾಗೂ MWS ಯೋಜನೆಯಿಂದ ನೀರು ಪೂರೈಕೆ ಮಾಡಲಾಗುತ್ತಿದ್ದು, ಮೇ-20 ವರೆಗೆ ಸಮಸ್ಯೆ ಉಂಟಾಗುವುದಿಲ್ಲವೆಂದು ವಿವರಿಸಿದರು.

2. ಕನ್ನೋಳ್ಳಿ ಹಾಗೂ ಇತರ 5 ಗ್ರಾಮಗಳು.

ಹಿರೇಪಡಸಗಿ ಗ್ರಾಮದಲ್ಲಿ ಜಾಕವೇಲ್ ಇದ್ದು, ಚಿಕ್ಕಪಡಲಗಿ ಬ್ಯಾರೇಜಿನ ಹಿನ್ನೀರಿನಿಂದ ನೀರು ಪೂರೈಕೆ ಮಾಡುತ್ತಿದ್ದು, ಲಭ್ಯವಿರುವ ನೀರು ಕೇವಲ ಒಂದುವಾರದವರೆಗೆ ಮಾತ್ರ ಸಾಕಾಗುತ್ತಿದೆ. ಪರ್ಯಾಯವಾಗಿ ಟಿಟಿಎಫ್-3 ರಲ್ಲಿ ಕೊಳವೆಬಾವಿಗಳನ್ನು ಕೊರೆದು ತುರ್ತು ನೀರು ಪೂರೈಕೆ ಮಾಡಲಾಗುವುದೆಂದು ವಿವರಿಸಿದರು.

ಈ 5 ಗ್ರಾಮಗಳ ಪೈಕಿ ಗೋಠೆ ಗ್ರಾಮದಲ್ಲಿ ಮಾತ್ರ ತೀವ್ರ ಕುಡಿಯುವ ನೀರಿನ ಸಮಸ್ಯೆ ಇದ್ದು, ಅಲ್ಲಿ ಈಗಾಗಲೇ 7 ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿದ್ದು, ಇದರಿಂದ ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಕೊಳವೆಬಾವಿಗಳನ್ನು ಕೊರೆದು ಒಂದು ವಾರದೊಳಗಾಗಿ ಕಾಮಗಾರಿ ಮುಕ್ತಾಯಗೊಳಿಸಿ, ನೀರು ಪೂರೈಕೆ ಮಾಡಲು ಸೂಚಿಸಿದರು. ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಪವಿಭಾಗ ಜಮಖಂಡಿ ಇವರು ಪ್ರಸ್ತುತ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಹಾಗೂ ನೀತಿ ಸಂಹಿತೆ ಮುಗಿದ ತಕ್ಷಣವೇ ಇಲಾಖೆಯಿಂದ ಅಲ್ಪಾ ಅವಧಿ ಟೆಂಡರ್ ಕರೆದು ಕ್ರಮವಹಿಸಬೇಕೆಂದರೂ ಸಹಿತ ಸುಮಾರು 15-20 ದಿನಗಳ ಕಾಲಾವಕಾಶ ಬೇಕಾಗುತ್ತದೆ ಎಂದು ವಿವರಿಸಿದರು.

ತುಂಗಳ ಗ್ರಾಮದಲ್ಲಿ ನೀರು ಲಭ್ಯವಿದ್ದು, ಯಾವುದೇ ಸಮಸ್ಯೆ ಸಧ್ಯಕ್ಕೆ ಇರುವುದಿಲ್ಲ. ಯಲ್ಲಟ್ಟಿ ಗ್ರಾಮದಲ್ಲಿ ಪ್ರಸ್ತುತ ಲಭ್ಯವಿರುವ ನೀರು ಒಂದು ತಿಂಗಳವರೆಗೆ ಸಾಕಾಗುತ್ತದೆ ಎಂದು ವಿವರಿಸಿದರು. ಅಧ್ಯಕ್ಷರು ಈಗಿನಿಂದಲೇ ಪೂರ್ವ ತಯಾರಿ ಮಾಡಿಕೊಂಡು, ಲಭ್ಯವಿರುವ ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಿ, ಅದರಿಂದ ನೀರು ಪೂರೈಕೆ ಮಾಡಲು ಆದ್ಯತೆಯ ಮೇಲೆ ಕ್ರಮವಹಿಸಲು ಸೂಚಿಸಿದರು.

ಹಳಿಂಗಳಿ ಗ್ರಾಮದಲ್ಲಿ MWS ದಿಂದ ನೀರು ಪೂರೈಕೆ ಮಾಡಲಾಗುತ್ತಿದ್ದು, ಹಳಿಂಗಳಿ ಗ್ರಾಮದ ಸುತ್ತಮುತ್ತಲು ನೀರಾವರಿ ಪ್ರದೇಶವಿರುವದರಿಂದ ಬೋರವೆಲ್‌ಗಳಲ್ಲಿ ಅಂತರ್ಜಲಮಟ್ಟ ಚೆನ್ನಾಗಿರುವುದರಿಂದ ಹಾಗೂ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಪಡೆದು ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಯಾವ ಯಾವ ಗ್ರಾಮಗಳಲ್ಲಿ NGS and Non NGS ಫೀಡರ್‌ಗಳಿಂದ ವಿದ್ಯುತ ಸಂಪರ್ಕ ಒದಗಿಸಲು ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಇವರಿಗೆ ಸೂಚಿಸಿದಾಗ, ಅಧೀಕ್ಷಕ ಅಭಿಯಂತರರು, ಸಮೀಪ ಇದ್ದಲ್ಲಿ ಸೌಲಭ್ಯ ಕಲ್ಪಿಸುವುದಾಗಿ ತಿಳಿಸಿದರು.

ಕಡಕೋಳ ಗ್ರಾಮದಲ್ಲಿ ಹಾಗೂ ಹುನಗುಂದ, ಬಾಗಲಕೋಟೆ ಮತ್ತು ಬೀಳಗಿ ತಾಲ್ಲೂಕಿನಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಗ್ರಾಮೀಣ ಪ್ರದೇಶದಲ್ಲಿ ಇರುವುದಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು ವಿವರಿಸಿದರು.

ಅಧ್ಯಕ್ಷರು, ಇಲಾಖೆಯಿಂದ ಹೊಸ ಕೊಳವೆಬಾವಿ ಕೊರೆದು ಆಧ್ಯತೆಯ ಮೇಲೆ ನೀರು ಪೂರೈಕೆ ಮಾಡಬೇಕಾಗಿದ್ದು, ತುರ್ತು ಕ್ರಮವಹಿಸಲು ಸಾಧ್ಯವಾಗದೇ ಇದ್ದಲ್ಲಿ ಬೇರೆ ಇಲಾಖೆಗಳಾದ ಕೆ.ಆರ್.ಐ.ಡಿ.ಎಲ್. ಹಾಗೂ ತಾಲ್ಲೂಕ ಪಂಚಾಯತಿ ಹಾಗೂ ಗ್ರಾಮ ಪಂಚಾಯತ ಮಟ್ಟದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ನಿಗದಿತ ಅವಧಿಯಲ್ಲಿ ನೀರು ಪೂರೈಕೆ ಮಾಡಲು ಸೂಚನೆಗಳನ್ನು ನೀಡಿದರು.

**<u>ಜಿ.ಎಲ್.ಬಿ.ಸಿ. ಹಾಗೂ ಜಿ.ಆರ್.ಬಿ.ಸಿ. ಕಾಲುವೆಗಳ ಮೂಲಕ ನೀರು ಬಿಡುಗಡೆಗೊಳಿಸಿರುವ ಕುರಿತು:</u>**

ಅಧ್ಯಕ್ಷರು, ಈಗಾಗಲೇ ನನ್ನ ಹತ್ತಿರ ಜಿ.ಎಲ್.ಬಿ.ಸಿ ಕಾಲುವೆಗಳಲ್ಲಿ ಸಾಕಷ್ಟು ಗಿಡಗಂಟಿಗಳು ಬೆಳೆದಿದ್ದು, ಇದರಿಂದ ನೀರು ಸರಾಗವಾಗಿ ನಿಗದಿತ ಗುರಿ ತಲುಪಲು ಸಾಧ್ಯವಾಗದೇ ಇರುವುದರಿಂದ ಆಧ್ಯತೆಯ ಮೇಲೆ ಗಿಡಗಂಟಿಗಳನ್ನು ಸ್ವಚ್ಚಗೊಳಿಸಲು ಸೂಚಿಸಿದರು.

ಅದಕ್ಕೆ ಜಿ.ಎಲ್.ಬಿ.ಸಿ. ಕಾರ್ಯನಿರ್ವಾಹಕ ಅಭಿಯಂತರರು, ಜಮಖಂಡಿ ರವರು ಇಲಾಖೆಯಲ್ಲಿ ನಿಗದಿತ ಅನುದಾನ ಸೀಮಿತ ಇರುವುದರಿಂದ ಗುರಿ ನಿಗದಿ ಪಡಿಸಿದ ಕಾಲುವೆಗಳನ್ನು ಮಾತ್ರ ಸ್ವಚ್ಛಗೊಳಿಸಲಾಗುವುದೆಂದು ವಿವರಿಸಿದರು.

ಅಧ್ಯಕ್ಷರು, ಇಂತಹ ಕಾಮಗಾರಿಗಳನ್ನು ನರೇಗಾ ಯೋಜನೆಯಡಿ ಕಾಲುವೆ ಸ್ವಚ್ಛಗೊಳಿಸಲು ತಿಳಿಸಿದರು.

ಜಿಲ್ಲಾಧಿಕಾರಿಗಳು, ಜಿ.ಎಲ್.ಬಿ.ಸಿ. ಕಾಲುವೆಗೆ ಬಿಡುಗಡೆಗೊಳಿಸಿದ ನೀರನ್ನು ನಿಗದಿತ ಗುರಿ ತಲುಪುವಂತೆ ಕಾಲುವೆಗಳ ಟ್ರೀ ಮ್ಯಾಪ್‌ಗಳನ್ನು ಸಿದ್ದಪಡಿಸಿಕೊಂಡಿದ್ದು, ಹಲವು ಸಭೆಗಳನ್ನು ತಗೆದುಕೊಂಡು ಶತಗತಾಯ ಕಾಲುವೆಗಳಿಗೆ ನೀರು ಹರಿಯುವಂತೆ ಯೋಜನೆಯನ್ನು ರೂಪಿಸಿ, ನಿರಂತರ ಶ್ರಮವಹಿಸಿ, ಉಪವಿಭಾಗಾಧಿಕಾರಿಗಳು, ಜಮಖಂಡಿ ಇವರ ನೇತೃತ್ವದಲ್ಲಿ ಎರಡು ಜನ ಕಾ.ನಿ.ಅಭಿಯಂತರರ ನಿರಂತರ ಪ್ರಯತ್ನದಿಂದ ಒಟ್ಟು 13 ಕೆರೆಗಳನ್ನು ಶೇಕಡಾ 30 ರಿಂದ 50 ರಷ್ಟು ನೀರು ಹರಿಸಲಾಗಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಯಶಸ್ವಿಯಾಗಿ ನೀರು ಗುರಿ ತಲುಪಿಸಿ, ಕೆರೆಗಳಿಗೆ ನೀರು ಹರಿಸಿರುವ ಕುರಿತು ಜಿಲ್ಲಾಡಳಿತ ಕೈಕೊಂಡ ಕ್ರಮಗಳ ಕುರಿತು ಶ್ಲಾಘನೆ ವ್ಯಕ್ತಪಡಿಸಿ ಎಲ್ಲ ಸದಸ್ಯರಿಗೆ ಸಭೆಯಲ್ಲಿ ಅಭಿನಂದನೆಗಳನ್ನು ತಿಳಿಸಿದರು.

<u>ಜಿ.ಆರ್.ಬಿ.ಸಿ. ಕಾಲುವೆ:</u>

ಪ್ರಸ್ತುತ ಜಿ.ಆರ್.ಬಿ.ಸಿ. ಕಾಲುವೆಗೆ ಬಿಡುಗಡೆಗೊಳಿಸಿದ ನೀರು ದಿನಾಂಕ: 20-04-2019 ರಂದು ಮುಂಜಾನೆ 09-00 ಗಂಟೆಯ ಸುಮಾರಿಗೆ ಇನ್ನೂ 118 ಕಿ.ಮೀ.ಗೆ ತಲುಪಿದ್ದು, ಜಿಲ್ಲೆಯ ಸರಹದ್ದು 119 ಕಿ.ಮೀ. ರಿಂದ ಪ್ರಾರಂಭವಾಗುತ್ತಿದೆ. ಕಾರಣ ಇನ್ನೂ ನೀರು ಜಿಲ್ಲೆಯ ಗಡಿಭಾಗಕ್ಕೆ ತಲುಪಿರುವುದಿಲ್ಲವೆಂದು ಕಾರ್ಯನಿರ್ವಾಹಕ ಅಭಿಯಂತರರು, ಜಿ.ಆರ್.ಬಿ.ಸಿ. ಬಾಗಲಕೋಟೆ ಇವರು ಸಭೆಗೆ ವಿವರಿಸಿದರು.

ಮುಂದುವರೆದು ಅಧ್ಯಕ್ಷರು ಮಾತನಾಡುತ್ತ, ನೀರು ಜಿಲ್ಲೆಯ ಗಡಿಭಾಗಕ್ಕೆ ತಲುಪಲು ಆಗಿರುವ ವಿಳಂಬದ ಕುರಿತು ವಿವರಣೆ ಒದಗಿಸಲು ಸೂಚಿಸಿದರು. ಕಾರ್ಯನಿರ್ವಾಹಕ ಅಭಿಯಂತರರು, ದಿನಾಂಕ: 19-04-2019 ರಂದು ತಹಶೀಲ್ದಾರ ಮುಧೋಳ ಇವರೊಂದಿಗೆ ಜಿ.ಆರ್.ಬಿ.ಸಿ. ಕಾಲುವೆಯ 78 ಕಿ.ಮೀ. ರವರೆಗೆ ಬೆಳಗಾವಿ ಜಿಲ್ಲೆಯಲ್ಲಿ ಸ್ಥಳ ಸಮೀಕ್ಷೆ ಕೈಕೊಂಡಿದ್ದು, ಸದರಿ ಸಂದರ್ಭದಲ್ಲಿ ಈಗಾಗಲೇ ಬಿಡುಗಡೆಗೊಳಿಸಿದ ನೀರು ಬೆಳಗಾವಿ ಜಿಲ್ಲೆಯಲ್ಲಿ ಕೆಲವೊಂದು ವಿತರಣಾ ಕಾಲುವೆಗಳ ಮೂಲಕ ನೀರು ಬಳಕೆಮಾಡಿಕೊಳ್ಳುತ್ತಿರುವದು ಕಂಡು ಬಂದಿದೆ ಇದರಿಂದ ನಮ್ಮ ಜಿಲ್ಲೆಯ ಗಡಿಭಾಗಕ್ಕೆ ನೀರು ತಲುಪಿರುವುದಿಲ್ಲವೆಂದು ತಿಳಿಸಿದರು.

ಅಧ್ಯಕ್ಷರು, ಈ ಬಗ್ಗೆ ಸಭೆಯಲ್ಲಿಯೇ ಮುಖ್ಯ ಅಭಿಯಂತರರು, ನೀರಾವರಿ ಉತ್ತರ ವಲಯ ಬೆಳಗಾವಿ ಇವರೊಂದಿಗೆ ದೂರವಾಣಿ ಮುಖೇನ ಸಂಪರ್ಕಿಸಿ, ನೀರು ನಿಗದಿತ ಗುರಿಯಾದ ಬಾಗಲಕೋಟೆ ಜಿಲ್ಲೆಯ 159 ಕಿ.ಮೀ. ತಲುಪಬೇಕಾಗಿರುವುದರಿಂದ ಬೆಳಗಾವಿ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಹಾಗೂ ಬಾಗಲಕೋಟೆ ಜಿಲ್ಲೆಯ ಪಾಲಿನ ನೀರನ್ನು ಬಾಗಲಕೋಟೆ ಜಿಲ್ಲೆಗೆ ಒದಗಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು.

ಜಿಲ್ಲಾಧಿಕಾರಿಗಳು, ನೀರಿನ ವೇಗ ಅಳೆಯುವ ಮಾಪಕವನ್ನು ಸಣ್ಣ ನೀರಾವರಿ ಇಲಾಖೆಯಿಂದ ಪಡೆದು ಜಿ.ಆರ್.ಬಿ.ಸಿ. ಕಾಲುವೆಗೆ ಅಳವಡಿಸಿ ವರದಿ ಸಲ್ಲಿಸಲು ಕ್ರಮವಹಿಸಲಾಗಿದೆ ಇದರಿಂದ ಜಿಲ್ಲೆಗೆ ಬರುವ ನೀರಿನ ಪ್ರಮಾಣ ಲಭ್ಯವಾಗುವುದೆಂದು ಸಭೆಗೆ ವಿವರಿಸಿದರು.

<u>ಟಿಟಿಎಫ್-1 ಮತ್ತು 2 ರ ಕ್ರಿಯಾ ಯೋಜನೆ ಕುರಿತು:</u>

ಅಧ್ಯಕ್ಷರು, ಟಿಟಿಎಫ್-1 ಮತ್ತು 2 ರ ಕ್ರಿಯಾ ಯೋಜನೆಯನ್ವಯ ಕೈಗೊಂಡ ಕಾಮಗಾರಿಗಳ ವಿವರವನ್ನು ಒದಗಿಸಲು ಕಾರ್ಯನಿರ್ವಾಹಕ ಅಭಿಯಂತರರಿಗೆ ಒದಗಿಸಲು ಸೂಚಿಸಿದರು.

## ಕುಡಿಯುವ ನೀರು ಪೂರೈಕೆ : ನಗರ ಪ್ರದೇಶ :-

ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಇವರು ಪ್ರಸ್ತುತ ಜಿಲ್ಲೆಯಲ್ಲಿ 15 ನಗರ ಸ್ಥಳಿಯ ಸಂಸ್ಥೆಗಳ ಪೈಕಿ ಒಟ್ಟು 362 ವಾರ್ಡಗಳಿದ್ದು, ಯಾವುದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಸ್ತುತ ಟ್ಯಾಂಕರ್ ಮೂಲಕ ನೀರು ಪೂರೈಕೆ ಇರುವುದಿಲ್ಲವೆಂದು ಸಭೆಗೆ ವಿವರಿಸಿದರು.

ಅಧ್ಯಕ್ಷರು, ಒಟ್ಟಾರೆ ಎಷ್ಟು ನಗರ ಸ್ಥಳಿಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಹಾಗೂ ಕೃಷ್ಣಾ ನದಿಗೆ ಅವಲಂಬಿತವಾಗಿರುವ ನಗರ ಪಟ್ಟಣ ಪ್ರದೇಶಗಳು ಯಾವವು ಇಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಯಾವ ಕ್ರಮಗಳನ್ನು ಕೈಗೊಂಡಿರುತ್ತಿರಿ ಎಂದು ವಿವರಣೆ ಒದಗಿಸಲು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಇವರಿಗೆ ಸೂಚಿಸಿದರು.

ಯೋಜನಾ ನಿರ್ದೇಶಕರು, ಒಟ್ಟು ಕೆರೂರ, ರಬಕವಿ-ಬನಹಟ್ಟಿ ಹಾಗೂ ತೇರದಾಳ ಪುರಸಭೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಸ್ಥಳಿಯ ಸಂಪನ್ಮೂಲಗಳಾದ ಕೊಳವೆಬಾವಿಗಳನ್ನು ಉಪಯೋಗಿಸಿಕೊಂಡು ನೀರು ಪೂರೈಕೆ ಮಾಡಿ ಪ್ರಸ್ತುತ ಸಮಸ್ಯೆಯನ್ನು ನಿವಾರಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ಕೃಷ್ಣಾ ನದಿಗೆ ಜಮಖಂಡಿ, ರಬಕವಿ-ಬನಹಟ್ಟಿ ಹಾಗೂ ತೇರದಾಳ ಪುರಸಭೆಗಳು ಕುಡಿಯುವ ನೀರಿಗೆ ಅವಲಂಬಿತವಾಗಿದ್ದು, ರಬಕವಿ-ಬನಹಟ್ಟಿ ಪಟ್ಟಣದಲ್ಲಿ 115 ಖಾಸಗಿ ಕೊಳವೆಬಾವಿಗಳನ್ನು ಗುರುತಿಸಿ, ಕರಾರು ಒಪ್ಪಂದ ಮಾಡಿಕೊಂಡಿದ್ದು, ಇದರಲ್ಲಿ 28 ಖಾಸಗಿ ಕೊಳವೆಬಾವಿಗಳನ್ನು, ಕೇವಲ ವಿದ್ಯುತ್ ಬಿಲ್ ಹಾಗೂ ಕೊಳವೆ ಬಾವಿಗಳು ದುರಸ್ತಿಯಾದಲ್ಲಿ ಅವುಗಳನ್ನು ಸರಿಪಡಿಸಿಕೊಡುವ ಕರಾರಿನೊಂದಿಗೆ ಈಗಾಗಲೇ ಉಪಯೋಗಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ತೇರದಾಳ ಪುರಸಭೆ ವ್ಯಾಪ್ತಿಯಲ್ಲಿ 54 ಕೊಳವೆಬಾವಿಗಳು, 11 ಕೈ ಪಂಪ್‌ಗಳು ಕಾರ್ಯನಿರ್ವಹಿಸುತ್ತವೆ. ರಬಕವಿ-ಬನಹಟ್ಟಿ ಪಟ್ಟಣದಲ್ಲಿ 16 ತೆರದ ಬಾವಿಗಳನ್ನು ಸ್ವಚ್ಛಗೊಳಿಸಿದ್ದು, ಇದರಿಂದ ನೀರು ಪೂರೈಕೆ ಮಾಡಲಾಗುತ್ತಿದೆ.

ಕೆರೂರ ಪಟ್ಟಣ ಪಂಚಾಯತಿಯಲ್ಲಿ 36 ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿದ್ದು, ಅವಶ್ಯಕತೆ ಅನುಗುಣವಾಗಿ ಹೊಸ ಕೊಳವೆಬಾವಿಗಳನ್ನು ಕೊರೆದು ತುರ್ತು ನೀರು ಪೂರೈಕೆ ಮಾಡಲಾಗುವುದೆಂದು ಸಭೆಗೆ ವಿವರಿಸಿದರು.

ಅಧ್ಯಕ್ಷರು, ಒಟ್ಟಾರೆ ನಗರ ಸ್ಥಳಿಯ ಸಂಸ್ಥೆಗಳಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಆಧ್ಯತೆಯ ಮೇಲೆ ಅವಶ್ಯಕತೆ ಕಂಡು ಬಂದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

## ಮೇವು ಪೂರೈಕೆ ವಿವರ:-

ಜಿಲ್ಲೆಯಲ್ಲಿ ಜನವರಿ ಮತ್ತು ಫೆಬ್ರವರಿ-2019 ರ ಮಾಹೆಯಲ್ಲಿ ಮೇವಿನ ಸಮೀಕ್ಷೆ ಜೊತೆಗೆ ಜಾನುವಾರುಗಳ ಸಮೀಕ್ಷೆಯನ್ನು ಸಹ ಕೈಗೊಂಡಿದ್ದು, ಸದರಿ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ 4,65,563 ಜಾನುವಾರುಗಳು ಇದ್ದು, 1,70,571 ಮೇ.ಟನ್ ಮೇವು ಲಭ್ಯವಿದೆ. ಈ ಮೇವು ಮುಂದಿನ 10 ವಾರಗಳಿಗೆ ಪೂರೈಸಬಹುದೆಂದು ಸಭೆಗೆ ವಿವರಿಸಿದರು.

ಸರ್ಕಾರದಿಂದ ಮೇವಿನ ಬೀಜದ 32431 ಕಿರುಪೊಟ್ಟಣಗಳು ಪೂರೈಕೆಯಾಗಿದ್ದು, ಇವುಗಳನ್ನು ನೀರಾವರಿ ಹೊಂದಿದ ರೈತರಿಗೆ ವಿತರಿಸಲಾಗಿದ್ದು, ಇದರಿಂದ ಅಂದಾಜು 32431 ಮೇ.ಟನ್ ಹಸಿಮೇವು

ಕಾರ್ಯನಿರ್ವಾಹಕ ಅಭಿಯಂತರರು, ಟಿಟಿಎಫ್-1 ಅಡಿ 210 ಕಾಮಗಾರಿಯನ್ನು ಕೈಗೊಂಡಿದ್ದು, ಇಲ್ಲಿಯವರೆಗೆ ಕೇವಲ 121 ಕಾಮಗಾರಿಗಳನ್ನು ಪೂರ್ಣಗೊಂಡಿರುತ್ತವೆ. ಹಾಗೂ ಟಿಟಿಎಫ್-2 ಅಡಿ 203 ಕಾಮಗಾರಿಗಳನ್ನು ಕೈಗೊಂಡಿದ್ದು, ಕೇವಲ 23 ಕಾಮಗಾರಿಗಳ ಪೂರ್ಣಗೊಂಡಿರುತ್ತವೆ ಎಂದು ಸಭೆಗೆ ವಿವರಿಸಿದರು.

ಟಿಟಿಎಫ್-1 ಮತ್ತು 2 ರಡಿ 413 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, 144 ಕಾಮಗಾರಿಗಳನ್ನು ಮಾತ್ರ ಮುಕ್ತಾಗೊಳಿಸಿದ್ದು, ಇನ್ನೂ 269 ಕಾಮಗಾರಿಗಳು ಪ್ರಗತಿ ಹಂತದಲ್ಲಿ ಇರುವ ಬಗ್ಗೆ ಅಧ್ಯಕ್ಷರು, ಕಾಮಗಾರಿ ಮುಕ್ತಾಯದ ಬಗ್ಗೆ ಅಸಮಾದಾನ ವ್ಯಕ್ತಪಡಿಸಿ, ನಿಮ್ಮ ಪ್ರಗತಿ ಪ್ರತಿಶತ 34.8 ರಷ್ಟು ಮಾತ್ರ ಇದ್ದು ಈಗಾಗಲೇ ಬೇಸಿಗೆ ಮಧ್ಯದಲ್ಲಿದ್ದು, ಬಾಕಿ ಉಳಿದ 269 ಕಾಮಗಾರಿಗಳನ್ನು ಎಪ್ರಿಲ್ ಅಂತ್ಯದೊಳಗಾಗಿ ಮುಕ್ತಾಯಗೊಳಿಸಿ, ಸಾರ್ವಜನಿಕರಿಗೆ ನೀರು ಪೂರೈಕೆ ಮಾಡಲು ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಾಗಲಕೋಟೆ ಇವರು ಇದಕ್ಕೆ ಪ್ರತಿಕ್ರಯಿಸುತ್ತ, ಸಹಾಯಕ ಅಭಿಯಂತರರುಗಳ ಕೊರತೆಯಿಂದಾಗಿ ಕಾರ್ಯದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿಯಾಗುತ್ತಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಪ್ರಾದೇಶಿಕ ಆಯುಕ್ತರು ಈ ಸಂದರ್ಭದಲ್ಲಿ ಈ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕೆ.ಆರ್.ಐ.ಡಿ.ಎಲ್ ಅಥವಾ ಗ್ರಾಮ ಪಂಚಾಯತಿಗಳಿಗೆ ವಹಿಸಿ ಅನುಷ್ಠಾನಗೊಳಿಸುವ ಪರ್ಯಾಯ ವ್ಯವಸ್ಥೆಯ ಕುರಿತು ಪರಿಶೀಲಿಸಲು ಸೂಚಿಸಲಾಯಿತು.

TTF-3 ರಡಿ ಜಿಲ್ಲೆಗೆ ರೂ. 300.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರಿಗೆ ಕ್ರಿಯಾ ಯೋಜನೆ ಅನುಮೋದನೆ ನೀಡಿರುವ ಬಗ್ಗೆ ವಿವರಣೆ ಒದಗಿಸಲು ಅಧ್ಯಕ್ಷರು, ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರು ಕಾ.ನಿ.ಅಭಿಯಂತರರು, RWS ಇಲಾಖೆ ರವರು ತಯಾರಿಸಿದ ಕ್ರಿಯಾ ಯೋಜನೆಯನ್ನು ಪುನರ್ ಪರಿಶೀಲಿಸಿ, ಪರಿಷ್ಕೃತವಾಗಿ ಮಾರ್ಪಾಡು ಮಾಡಿ ಟಿಟಿಎಫ್-3 ಯ ಕ್ರಿಯಾ ಯೋಜನೆಯನ್ನು ದಿನಾಂಕ: 19-04-2019 ರಂದು ಅನುಮೋದನೆ ನೀಡಲಾಗಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಟಿಟಿಎಫ್-3 ರಡಿ ಹೊಂದಾಣಿಕೆಯಾಗಿ ಅನುದಾನ ಉಪಯೋಗಿಸಿರುವ ಬಗ್ಗೆ ವಿವರಣೆ ಒದಗಿಸಲು ಸೂಚಿಸಿದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಾಗಲಕೋಟೆ ರವರು ಯಾವುದೇ ಹೊಂದಾಣಿಕೆ ಅನುದಾನವನ್ನು ಉಪಯೋಗಿಸದೇ ಟಿಟಿಎಫ್-3 ರಡಿ ಅನುದಾನಕ್ಕೆ ಮಾತ್ರ ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದು ವಿವರಿಸಿದರು.

ಅಧ್ಯಕ್ಷರು, ಟಿಟಿಎಫ್-1 ಮತ್ತು ಟಿಟಿಎಫ್-2 ರ ಮಾದರಿಯಲ್ಲಿ ಹೊಂದಾಣಿಕೆ ಅನುದಾನವನ್ನು ಬಳಕೆ ಮಾಡಿ ಕ್ರಿಯಾ ಯೋಜನೆಯನ್ನು ಪುನರ್ ಪರಿಶೀಲಿಸುವಂತೆ ಸೂಚಿಸಿದರು ಮತ್ತು ಕ್ರಿಯಾ ಯೋಜನೆಯನ್ನು ಅನುಮೋದಿಸುವಾಗ ಒಂದು ಕಾಮಗಾರಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಹೊಂದಿರುವ ಅಂದಾಜು ಪತ್ರಿಕೆ ಸಿದ್ಧಪಡಿಸಿ ಅನುಮೋದಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬಾಗಲಕೋಟೆ ಇವರು ಮುಂಬರುವ ತಿಂಗಳಿನಲ್ಲಿ 65 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಪ್ರಾದೇಶಿಕ ಆಯುಕ್ತರು, ಗುರುತಿಸಲಾದ 65 ಗ್ರಾಮಗಳಲ್ಲಿ ಸಿ.ಆರ್.ಎಫ್ ಅನುದಾನವನ್ನು ಬಳಸಿಕೊಂಡು ಯಾವುದೇ ರೀತಿಯ ಸಮಸ್ಯೆ ಉಂಟಾಗದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಉತ್ಪಾದನೆಯಾಗುವ ನೀರಿಕ್ಷೆ ಇದ್ದು ಇದರಿಂದ ರೈತರು ತಮ್ಮಲ್ಲಿರುವ ಸರಾಸರಿ 5-6 ಜಾನುವಾರುಗಳಿಗೆ 6 ವಾರಗಳವರೆಗೆ ಉಪಯೋಗಿಸಬಹುದಾಗಿದೆ.

ಮುಂಬರುವ ದಿನಗಳಲ್ಲಿ ಮೇವಿನ ಸಮಸ್ಯೆ ಉಂಟಾದಲ್ಲಿ ಮೇವು ಸರಬರಾಜು ಕುರಿತು ಟೆಂಡರ್ ಪ್ರಕ್ರಿಯೇ ಕೈಗೊಂಡಿದ್ದು, ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಿ ದರ ನಿಗದಿ ಪಡಿಸಲಾಗಿದೆ. ಅವಶ್ಯಕ ಅನುಗುಣವಾಗಿ ಬಿಡ್‌ದಾರರಿಂದ ಮೇವು ಖರೀದಿಸಲು ಕ್ರಮವಹಿಸಲಾಗುವುದು.

ಈಗಾಗಲೇ ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲು 6 ತಾಲ್ಲೂಕುಗಳಲ್ಲಿ ಸ್ಥಳ ಗುರುತಿಸಲಾಗಿದೆ. ಅವಶ್ಯಕತೆಗೆ ಅನುಗುಣವಾಗಿ ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುವುದು. ಪ್ರಸ್ತುತ ಬದಾಮಿ ಹಾಗೂ ಬಾಗಲಕೋಟೆ ತಾಲ್ಲೂಕುಗಳಲ್ಲಿ ಬಫರ್ ಸ್ಟಾಕ್ ಕಾಯ್ದಿರಿಸಲಾಗಿದೆ ಎಂದು ಸಭೆಗೆ ಉಪ ನಿರ್ದೇಶಕರು, ಪಶುಪಾಲನೆ ಇವರು ವಿವರಿಸಿದರು.

**ಎಮ್.ಎನ್.ಆರ್.ಇ.ಜಿ.ಎ. :-**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಇವರು 2019-20 ನೇ ಸಾಲಿನಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಮಾನವದಿನಗಳ ಸೃಜನೆ ಗುರಿಯನ್ನು 37.00 ಲಕ್ಷ ಮಾನವ ದಿನಗಳಿಗೆ ಗುರಿ ನಿಗದಿಪಡಿಸಿದ್ದು, ಇದುವರೆಗೆ 1.28 ಲಕ್ಷ ಮಾನವ ದಿನಗಳ ಸೃಜನೆ ಮಾಡಲಾಗಿದೆ ಎಂದು ತಿಳಿಸಿದರು.

ಸಭಾಧ್ಯಕ್ಷರು 2019-20 ನೇ ಸಾಲಿನಲ್ಲಿ ನಿಗದಿಪಡಿಸಲಾದ ಗುರಿಯ ಪೈಕಿ ಶೇ. 40% ಅಂದರೆ 14.8 ಲಕ್ಷ ಮಾನವ ದಿನಗಳನ್ನು ಜನರಿಗೆ ಉದ್ಯೋಗದ ಅವಶ್ಯಕತೆ ಇರುವ ಅಂದರೆ ಎಪ್ರಿಲ್, ಮೇ ಹಾಗೂ ಜೂನ್ ತಿಂಗಳ ಅಂತ್ಯದೊಳಗೆ ಸೃಜಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಇದಲ್ಲದೇ ಜಿಲ್ಲೆಯ ಜನರು ಉದ್ಯೋಗವನ್ನು ಅರಸಿ ಬೇರೆ ಸ್ಥಳಗಳಿಗೆ ವಲಸೆ ಹೋಗದಂತೆ ಅಗತ್ಯವಾದ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಅಧ್ಯಕ್ಷರು, ಒಟ್ಟಾರೆ ಜಿಲ್ಲೆಯಲ್ಲಿ ಮೇವಿನ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ಉದ್ಯೋಗದ ಸಮಸ್ಯೆ ಉಂಟಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಂಡು, ಕ್ರಮವಹಿಸಲು ಕಟ್ಟು ನಿಟ್ಟಿನ ಸೂಚನೆಗಳನ್ನು ನೀಡಿದರು.

ಕೊನೆಯದಾಗಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ತುಷಾರ್ ಗಿರಿ ನಾಥ್)
ಪ್ರಾದೇಶಿಕ ಆಯುಕ್ತರು,
ಬೆಳಗಾವಿ ವಿಭಾಗ, ಬೆಳಗಾವಿ
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಾಗಲಕೋಟೆ

ಪ್ರತಿಯನ್ನು ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.

**ದಿನಾಂಕ:29.04.2019 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ:ಎನ್. ನಾಗಾಂಬಿಕಾದೇವಿ ಭಾ.ಆ.ಸೇ ರವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಕೆ.ಡಿ.ಪಿ. ಸಭೆಯ ನಡವಳಿಗಳು.**

**ಸಭೆಗೆ ಹಾಜರಿದ್ದವರು:**

1. ಡಾ:ಎನ್. ನಾಗಾಂಬಿಕಾದೇವಿ, ಭಾ.ಆ.ಸೇ. ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.
2. ಶ್ರೀ ಪಿ. ಅನಿರುದ್ಧ್ ಶ್ರವಣ್, ಭಾ.ಆ.ಸೇ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ.
3. ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
4. ಸಹಾಯಕ ಯೋಜನಾಧಿಕಾರಿ, (ಪ್ರ) ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
5. ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ಉಪನಿರ್ದೇಶಕರ ಪರವಾಗಿ ಸಮಾಜ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
6. ವ್ಯವಸ್ಥಾಪಕರು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪರವಾಗಿ ಚಿಕ್ಕಬಳ್ಳಾಪುರ.
7. ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ.
8. ಸಹಾಯಕ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳುಪರವಾಗಿ ಚಿಕ್ಕಬಳ್ಳಾಪುರ.
9. ಭೂ ವಿಜ್ಞಾನಿ, ಹಿರಿಯ ಭೂ ವಿಜ್ಞಾನಿ ಪರವಾಗಿ ಗಣಿ ಮತ್ತು ಭೂ ವಿಜ್ಞಾನಿ ಇಲಾಖೆ.
10. ಶ್ರೀ ಎ. ರವೀಂದ್ರ ಬಾಬು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚಿಂತಾಮಣಿ ತಾಲ್ಲೂಕು.
11. ಶ್ರೀ ಅನಿಲ್ ಕುಮಾರ್ ಎಸ್. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚಿಕ್ಕಬಳ್ಳಾಪುರ ತಾಲ್ಲೂಕು.
12. ಶ್ರೀ ಬಿ.ಎಸ್. ಬಾಲನ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಾಗೇಪಲ್ಲಿ ತಾಲ್ಲೂಕು.
13. ಶ್ರೀ ಎಂ. ನಾಗರಾಜು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗೌರಿಬಿದನೂರು ಮತ್ತು ಗುಡಿಬಂಡೆ ತಾಲ್ಲೂಕು.
14. ಶ್ರೀ ಕೆ.ಎಸ್. ರಾಮಲಿಂಗರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಉಪ ವಿಭಾಗ, ಬಾಗೇಪಲ್ಲಿ.
15. ಶ್ರೀ ಎಮ್.ಎಚ್ ಆದಿನಾರಾಯಣಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಗೌರಿಬಿದನೂರು.
16. ಶ್ರೀ ವೆಂಕಟರವಣಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಚಿಂತಾಮಣಿ.
17. ಶ್ರೀ ಎಂ. ಶ್ರೀನಿವಾಸನ್, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯ್ತಿ, ಚಿಂತಾಮಣಿ.
18. ಶ್ರೀ ಎಸ್. ವೆಂಕಟೇಶ್, ತಾಲ್ಲೂಕು ವಸತಿ ನೋಡಲ್ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಚಿಂತಾಮಣಿ.
19. ಶ್ರೀ ಎಸ್.ಜಿ. ನಾಗೇಶ್, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
20. ಶ್ರೀ ಎಸ್. ಜನಾರ್ಧನ, ಡಿ.ಡಿ.ಪಿ.ಯು. ಚಿಕ್ಕಬಳ್ಳಾಪುರ.
21. ಶ್ರೀ ಎನ್ ರಾಮಸ್ವಾಮಿ, ಕನ್‌ಸಲ್ಟೆಂಟ್, ಎನ್.ಆರ್.ಎಲ್.ಎಮ್. ಚಿಕ್ಕಬಳ್ಳಾಪುರ.
22. ಡಾ:ಎನ್.ಎ. ಮಥುರನಾಥ ರೆಡ್ಡಿ, ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಚಿಕ್ಕಬಳ್ಳಾಪುರ.
23. ಶ್ರೀ ಜಿ.ಆರ್. ನಟರಾಜ್, ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ. ಚಿಕ್ಕಬಳ್ಳಾಪುರ.
24. ಶ್ರೀ ಎಂ.ಎಸ್.ಬೈರಾರೆಡ್ಡಿ, ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ.

25.ಶ್ರೀ ಎಂ. ಶ್ರೀಧರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಾದೇಶಿಕ ಅರಣ್ಯ ಇಲಾಖೆ.
26.ಶ್ರೀ ಶ್ರೀನಾಥ ಕೆ. ಕಾರ್ಯನಿರ್ವಾಹಕ ಅಧಿಕಾರಿ, ಬೆವಿಕಂ, ಚಿಂತಾಮಣಿ.
27.ಶ್ರೀ ಬಿ.ಪಿ. ಮಂಜುನಾಥ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಬೆವಿಕಂ, ಚಿಕ್ಕಬಳ್ಳಾಪುರ.
28.ಶ್ರೀ ಸಿ. ಶ್ರೀನಿವಾಸ, ಕಾರ್ಯನಿರ್ವಾಣಾಧಿಕಾರಿ, ತಾಲ್ಲೂಕು ಪಂಚಾಯ್ತಿ, ಬಾಗೇಪಲ್ಲಿ.
29.ಶ್ರೀ ರಂಗಪ್ಪ ಡಿ.ಜಿ.ತಾಲ್ಲೂಕು ವಸತಿ ನೋಡಲ್ ಅಧಿಕಾರಿ, ತಾಲ್ಲೂಕು ಪಂಚಾಯ್ತಿ ಬಾಗೇಪಲ್ಲಿ / ಗುಡಿಬಂಡೆ.
30. ಶ್ರೀ ಬಿ. ರುದ್ರಪ್ಪ, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ.
31. ಶ್ರೀ ಹೇಮಂತ್ ಎಸ್. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಚಿಕ್ಕಬಳ್ಳಾಪುರ.
32.ಡಾ: ಕೆ.ಸಿ. ಗುರಪ್ಪ, ಉಪ ವ್ಯವಸ್ಥಾಪಕರು, ಕೋಲಾರ ಹಾಲು ಒಕ್ಕೂಟ.
33.ಶ್ರೀ ಶಿವಕುಮಾರ್ ಬಿ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯ್ತಿ, ಶಿಡ್ಲಘಟ್ಟ.
34.ಶ್ರಿ ಮುರಡಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ಗೌರಿಬಿದನೂರು ತಾಲ್ಲೂಕು.
35.ಡಾ:ಬಿ.ಎಂ. ರವಿಶಂಕರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ.
36.ಡಾ: ರಮೇಶ್ ಪಿ.ವಿ. ಜಿಲ್ಲಾ ಆಸ್ಪತ್ರೆ ಚಿಕ್ಕಬಳ್ಳಾಪುರ.
37.ಶ್ರೀ ಬಿ.ವಿ. ಅನಂತ, ಕಿರಿಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ.
38.ಶ್ರೀ ಎಸ್.ಜಿ. ಲೋಕುರ್, ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ.
39.ಶ್ರೀ ರವಿಕುಮಾರ್ ಹೆಚ್. ಕಾರ್ಯನಿರ್ವಾಹಕ ಅಧಿಕಾರಿ, (ಪ್ರ) ಗುಡಿಬಂಡೆ.
40.ಶ್ರೀ ಸುನಿಲ್ ಕುಮಾರ್ ಎಮ್.ಆರ್. ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ಚಿಕ್ಕಬಳ್ಳಾಪುರ.
41. ಶ್ರೀ ಶಾಂತರಸ ಎನ್.ಎಂ. ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
42.ಶ್ರೀ ಬಿ. ನಾರಾಯಣಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಶಿಡ್ಲಘಟ್ಟ ತಾಲ್ಲೂಕು.
43.ಶ್ರೀ ಅಶ್ವತ್ಥಯ್ಯ, ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
44.ಜಿಲ್ಲಾ ವಕ್ಛ್ ಅಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ.
45.ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಚಿಕ್ಕಬಳ್ಳಾಪುರ.
46.ಶ್ರೀ ಕಿರಣ್, ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಪರವಾಗಿ
47.ಶ್ರೀ ಎಲ್. ಕೇಶವಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಶಿಡ್ಲಘಟ್ಟ.
48.ಶ್ರೀ ಎಸ್.ವಿ. ಬಾಲಕೃಷ್ಣ, ತಾಂತ್ರಿಕ ಸಹಾಯಕರು, ಪಿ.ಎಮ್.ಜಿ.ಎಸ್.ವೈ. ವಿಭಾಗ, ಚಿಕ್ಕಬಳ್ಳಾಪುರ.
49.ಶ್ರೀ ಹೆಚ್.ವಿ. ಹರೀಶ್, ಪೌರಾಯುಕ್ತರು, ನಗರಸಭೆ, ಚಿಂತಾಮಣಿ.
50.ಶ್ರೀ ಬಿ.ವಿ. ಚಕ್ರಪಾಣಿ, ಸಹಾಯಕ ಅಭಿಯಂತರರು, ನಗರಸಭೆ, ಚಿಂತಾಮಣಿ.
51. ಶ್ರೀ ಶಿವಪ್ರಸಾದ್, ಅಸೋಸಿಯಟ್ ಪ್ರೋಗ್ರಾಮರ್, ಚಿಂತಾಮಣಿ ನಗರ ಸಭೆ.
52.ಶ್ರೀ ಎನ್. ನಾಗರಾಜ, ಪ್ರಥಮ ದರ್ಜೆ ಸಹಾಯಕರು, ಶಿಡ್ಲಘಟ್ಟ ನಗರ ಸಭೆ.
53.ತಹಸೀಲ್ದಾರ್ ಚಿಂತಾಮಣಿ.
54.ಶ್ರೀಮತಿ ಎನ್. ಶೋಭ, ಶಿರಸ್ಥೆದಾರರು, ಚಿಂತಾಮಣಿ.
55.ಶ್ರೀಮತಿ ಅರುಣಿ ಕೆ.ಎನ್. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ.
56.ಶ್ರೀಮತಿ ಪಂಕಜ, ಮುಖ್ಯಾಧಿಕಾರಿ, ಪುರಸಭೆ, ಬಾಗೇಪಲ್ಲಿ.
57.ಶ್ರೀ ರವೀಂದ್ರನಾಥ ತಳವಾಡೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಚಿಕ್ಕಬಳ್ಳಾಪುರ.

ಮಾನ್ಯ ಜಿಲ್ಲಾಧಿಕಾರಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಚಿಕ್ಕಬಳ್ಳಾಪುರ ಜಿಲ್ಲೆ, ಜಿಲ್ಲಾ ಮಟ್ಟದ ಅಧಿಕಾರಿಗಳು, ಹಾಗೂ ಪತ್ರಿಕಾ ಮಾಧ್ಯಮದವರಿಗೆ ಸ್ವಾಗತ ಕೋರಿದರು. ಹಾಗೂ ಇಂದಿನ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಡಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮುಖ್ಯವಾಗಿ ಜಿಲ್ಲೆಯಲ್ಲಿ ತಲೆದೋರಿರುವ ಬರ ನಿರ್ವಹಣೆ, ಕುಡಿಯುವ ನೀರಿನ ಸಮಸ್ಯೆ ಜಿಲ್ಲೆಯ ಅಭಿವೃದ್ಧಿ ಇತ್ಯಾದಿ ವಿಷಯಗಳ ಕುರಿತು ಕೂಲಂಕುಷವಾಗಿ ಚರ್ಚಿಸಲಾಗುವುದೆಂದು ತಿಳಿಸಿ ಸಭೆಯು ಪ್ರಾರಂಭವಾಯಿತು.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಮೊದಲಿಗೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಗೆ ಜಿಲ್ಲೆಯಲ್ಲಿ ಆಗಿರುವ ಮಳೆಯ ಪ್ರಗತಿ ಕುರಿತು ವಿವರಿಸಲು ಸೂಚಿಸಿದರು.

**ಕೃಷಿ ಇಲಾಖೆ:** ಜಂಟಿ ಕೃಷಿ ನಿರ್ದೇಶಕರು ತಿಳಿಸುತ್ತಾ ಜಿಲ್ಲೆಯಲ್ಲಿ ಏಪ್ರಿಲ್ ಮಾಹೆಯ ಅಂತ್ಯದವರೆಗೆ 154 ಮಿ.ಮಿ. ಮಳೆಯಾಗಿರುತ್ತದೆ. ಕೆಲವು ಹೋಬಳಿಗಳಲ್ಲಿ ಮಳೆ ಆಗಿರುವುದಿಲ್ಲ ಎಂದು ತಿಳಿಸಿದಾಗ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿಕ್ರಿಯಿಸಿ ಕಳೆದ ವರ್ಷ ಏಪ್ರಿಲ್ ಮಾಹೆಯಲ್ಲಿ ಆಗಿರುವ ಮಳೆಯ ವಿವರ ನೀಡಲು ತಿಳಿಸಿದಾಗ ಜಂಟಿ ಕೃಷಿ ನಿರ್ದೇಶಕರು ಕಳೆದ ವರ್ಷ ಏಪ್ರಿಲ್ ಮಾಹೆಯಲ್ಲಿ 126 ಮಿ.ಮಿ. ಮಳೆ ಆಗಿರುತ್ತದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸರಾಸರಿ 124 ಮಿ.ಮಿ ಮಳೆ ಆಗಿರುತ್ತದೆ. ಕಳೆದ ವರ್ಷಕ್ಕಿಂತ ಪ್ರಸಕ್ತ ವರ್ಷದಲ್ಲಿ ಏಪ್ರಿಲ್ ಮಾಹೆಯಲ್ಲಿ 30 ಮಿ.ಮಿ ನಷ್ಟು ಮಳೆ ಹೆಚ್ಚಾಗಿರುತ್ತದೆ. ಕಳೆದ ಸಾಲಿನಲ್ಲಿ ಕೃಷಿ ಕಛೇರಿ ಕಟ್ಟಡಕ್ಕಾಗಿ ರೂ. 10.00 ಲಕ್ಷಗಳು ಬಿಡುಗಡೆಯಾಗಿ ಸಂಪೂರ್ಣವಾಗಿ ವೆಚ್ಚವಾಗಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು. **(ಕ್ರಮ: ಜಂಟಿ ಕೃಷಿ ನಿರ್ದೇಶಕರು)**

**ಬೆಳೆ ನಷ್ಟ ಪರಿಹಾರ ವಿತರಣೆ ಕುರಿತು:** 2018-19ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ಬೆಳೆನಷ್ಟ ಪರಿಹಾರಕ್ಕೆ ಸಂಬಂಧಿಸಿದಂತೆ ಜಿಲ್ಲೆಯಾದ್ಯಂತ 1494 ಗ್ರಾಮಗಳಲ್ಲಿ 81,771 ಹೆಕ್ಟೇರ್ ಬೆಳೆ ನಷ್ಟವಾಗಿದ್ದು, ಒಟ್ಟು 32267 ರೈತರಿಗೆ ಒಟ್ಟು ರೂ. 5.11 ಕೋಟಿಗಳನ್ನು ನೇರವಾಗಿ ರೈತರ ಖಾತೆಗೆ ಹಣ ಜಮೆ ಮಾಡಲಾಗಿದೆಯೆಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

**ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ ಕುರಿತು:** ಜಿಲ್ಲೆಯಲ್ಲಿ ಒಟ್ಟು 257 ಸಮಸ್ಯಾತ್ಮಕ ಗ್ರಾಮಗಳಿದ್ದು, ಟ್ಯಾಂಕರ್ ಮುಖಾಂತರ 116 ಗ್ರಾಮಗಳಿಗೆ ಹಾಗೂ ಖಾಸಗಿ ಕೊಳವೆಬಾವಿಗಳ ಮೂಲಕ 141 ಗ್ರಾಮಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದೆ. ಇಲ್ಲಿಯವರೆಗೆ ಸಮಸ್ಯಾತ್ಮಕ ಗ್ರಾಮಗಳಲ್ಲಿ 135 ಕೊಳವೆಬಾವಿಗಳನ್ನು ಕೊರೆಸಲಾಗಿದ್ದು, ಈ ಪೈಕಿ 47 ಕೊಳವೆಬಾವಿ ಸಫಲವಾಗಿದ್ದು, 88 ಸ್ಥಳಗಳಲ್ಲಿ ಕೊಳವೆಬಾವಿಗಳು ವಿಫಲವಾಗಿರುತ್ತದೆಯೆಂದು ಕಾರ್ಯಪಾಲಕ ಇಂಜಿನಿಯರ್ ರವರು ಸಭೆಗೆ ಮಾಹಿತಿ ನಿಡಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲೆಯಲ್ಲಿ ಕೊರೆದಿರುವ ಕೊಳವೆಬಾವಿಗಳು 47 ಮಾತ್ರ ಸಫಲವಾಗಿದ್ದು 88 ವಿಫಲವಾಗಿದ್ದು, ಶೇ. 65 ರಷ್ಟು ಕೊಳವೆಬಾವಿಗಳು ವಿಫಲವಾಗಿರುವುದರಿಂದ ಕೆ.ಎಸ್.ಆರ್.ಎ.ಸಿ. ರವರ ತಂತ್ರಜ್ಞಾನದ (ಮ್ಯಾಪ್) ಪ್ರಕಾರ ಕೊಳವೆಬಾವಿ ಕೊರೆಸಲು ಕಾರ್ಯಪಾಲಕ ಇಂಜಿನಿಯರ್ ರವರಿಗೆ ಸೂಚಿಸಿದರು ಹಾಗೂ ಗ್ರಾಮಗಳ ಹೊರಭಾಗದಲ್ಲಿ ನೀರಿನ ಲಭ್ಯತೆ ಇದ್ದರೆ ಅಲ್ಲಿ ಕೊಳವೆಬಾವಿ ಕೊರೆಸಿ ಪೈಪ್‌ಲೈನ್ ಮುಖಾಂತರ ಗ್ರಾಮಗಳಿಗೆ ನೀರು ಒದಗಿಸಲು ಕ್ರಮ ವಹಿಸಲು ಕಾರ್ಯಪಾಲಕ ಇಂಜಿನಿಯರ್ ರವರಿಗೆ ಸೂಚಿಸಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೊರೆದ ಕೊಳವೆಬಾವಿಗಳು ವಿಫಲವಾಗಲು ಕಾರಣವೇನು ಎಂದು ಪ್ರಶ್ನಿಸಿದರು. ಎನ್.ಆರ್.ಡಿ.ಡಬ್ಲ್ಯೂ.ಪಿ ರಡಿ ಒಟ್ಟು 1870 ಕಾಮಗಾರಿಗಳಿಗೆ ಅನುಮೋದನೆಯಾಗಿದ್ದು, 1788 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ರೂ. 5539 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ರಾಜ್ಯ ವಲಯದ ಟಾಸ್ಕ್‌ಫೋರ್ಸ್ ಘಟಕದಡಿ ಮೊದಲನೆ ಹಂಚಿಕೆಯಲ್ಲಿ 125 ಕಾಮಗಾರಿಗಳಿಗೆ ಅನುಮೋದನೆ ದೊರೆತಿದ್ದು, ಅಷ್ಟೂ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತದೆ. 2ನೇ ಹಂಚಿಕೆಯಲ್ಲಿ 125 ಕಾಮಗಾರಿಗಳು ಅನುಮೋದನೆಯಾಗಿದ್ದು ಇಲ್ಲಿಯವರೆಗೆ 111 ಕಾಮಗಾರಿಗಳನ್ನು ಪೂರ್ಣಗೊಳಿಸಿ ರೂ. 260 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 3ನೇ ಹಂಚಿಕೆಯಲ್ಲಿ 133 ಕಾಮಗಾರಿಗಳು ಅನುಮೋದನೆಯಾಗಿದ್ದು, ಇಲ್ಲಿಯವರೆಗೆ ಶೂನ್ಯ ಪ್ರಗತಿ ಇರುವುದರ ಬಗ್ಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಅಸಮಾಧಾನ ವ್ಯಕ್ತಪಡಿಸಿದರು ಹಾಗೂ ಶೀಘ್ರವಾಗಿ ಪ್ರಗತಿ ಸಾಧಿಸಲು ಸೂಚಿಸಿದರು.

58. ಶ್ರೀ ವೆಂಕಟಾಚಲಪತಿ, ಜಿಲ್ಲಾ ವ್ಯವಸ್ಥಾಪಕರು, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಚಿಕ್ಕಬಳ್ಳಾಪುರ.
59. ಶ್ರೀಮತಿ ಜಿ.ಕೆ. ಲಕ್ಷ್ಮೀದೇವಮ್ಮ, ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
60. ಶ್ರೀ ಜಿ. ಕೃಷ್ಣೇಗೌಡ, ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿಕ್ಕಬಳ್ಳಾಪುರ.
61. ಶ್ರೀ ಎನ್. ನಾಗರಾಜ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯ್ತಿ, ಗುಡಿಬಂಡೆ.
62. ಡಾ:ಅನಿಲ್ ಕುಮಾರ್ ಎ. ಆಯುಷ್ ವೈಧ್ಯಾಧಿಕಾರಿಗಳು.
63. ಶ್ರೀ ಎನ್. ವಾದಿರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಚಿಕ್ಕಬಳ್ಳಾಪುರ.
64. ಡಾ:ಅಶೋಕ ವಿ. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
65. ಶ್ರೀ ಶೇಖ್ ಅಲಿ, ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
66. ಶ್ರೀ ಸಿ.ಎನ್. ರುದ್ರಸ್ವಾಮಿ, ವ್ಯವಸ್ಥಾಪಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ.
67. ಶ್ರೀ ಸಿಬ್ಗತ ವುಲ್ಲಾ, ತಹಸೀಲ್ದಾರ, ಬಾಗೇಪಲ್ಲಿ
68. ಶ್ರೀ ಡಿ. ಹನುಮಂತರಾಯಪ್ಪ, ತಹಶೀಲ್ದಾರ, ಗುಡಿಬಂಡೆ.
69. ಶ್ರೀ ಪ್ರಸಾದ ಎಂ. ಉದ್ಯೋಗಾಧಿಕಾರಿ, ಚಿಕ್ಕಬಳ್ಳಾಪುರ.
70. ಶ್ರೀಮತಿ ಕೆ. ಅರುಂಧತಿ, ತಹಶೀಲ್ದಾರ್-2 ಗೌರಿಬಿದನೂರು ತಾಲ್ಲೂಕು.
71. ಶ್ರೀ ಸಿ. ಜಗದೀಶ್, ಅಬಕಾರಿ ಉಪ ಆಯುಕ್ತರು.
72. ಶ್ರೀ ಶಿವಕುಮಾರ್, ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ.
73. ಶ್ರೀ ಕುಮಾರ ಸ್ವಾಮಿ, ಎಸ್.ಆರ್. ತೋಟಗಾರಿಕೆ ಉಪ ನಿರ್ದೇಶಕರು, ಚಿಕ್ಕಬಳ್ಳಾಪುರ.
74. ಶ್ರೀ ಹನುಮಂತರಾಜು, ಪೌರಾಯುಕ್ತರು, ನಗರಸಭೆ ಶಿಡ್ಲಘಟ್ಟ.
75. ಶ್ರೀ ರಮೇಶ್ ಕೆ.ವಿ. ಕಿರಿಯ ಅಭಿಯಂತರರು, ನಗರಸಭೆ ಶಿಡ್ಲಘಟ್ಟ.
76. ಶ್ರೀಮತಿ ಎ. ಸರೋಜ ಸಹಾಯಕ ನಿದೇಶಕರು, ಪಿಂಚಣಿ ಸಣ್ಣ ಉಳಿತಾಯ, ಚಿಕ್ಕಬಳ್ಳಾಪುರ.
77. ಶ್ರೀ ದ್ವಾರಕಪ್ರಸಾದ್ ಈ. ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಚಿಕ್ಕಬಳ್ಳಾಪುರ.
78. ಶ್ರೀ ಆರ್. ಬಸವರಾಜು, ಜಿಲ್ಲಾ ವ್ಯವಸ್ಥಾಪಕರು, ದೇವರಾಜು ಅರಸು ಅಭಿವೃದ್ಧಿ ನಿಗಮ.
79. ಉಪ ನಿರ್ದೇಶಕರು, ಕೈಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
80. ಶ್ರೀ ಆರ್. ನರಸಿಂಹಮೂರ್ತಿ, ಜಿಲ್ಲಾ ಅಧಿಕಾರಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಚಿಕ್ಕಬಳ್ಳಾಪುರ.
81. ಶ್ರೀ ಸತ್ಯಶಂಕರ್ ಹೆಚ್. ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್, ಚಿಕ್ಕಬಳ್ಳಾಪುರ.
82. ಶ್ರೀ ಎನ್ ಪಾಂಡುರಂಗ, ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ, ಚಿಕ್ಕಬಳ್ಳಾಪುರ.
83. ಮೈನಾಶ್ರೀ ಸಿ. ವಾರ್ತಾ ಸಹಾಯಕರು, ವಾರ್ತಾ ಇಲಾಖೆ, ಚಿಕ್ಕಬಳ್ಳಾಪುರ.
84. ನಾಜೀಮಾ ಖಾತೂನ್, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
85. ಶ್ರೀಮತಿ ರೂಪ ಎಲ್. ಜಂಟಿ ಕೃಷಿ ನಿರ್ದೇಶಕರು
86. ಶ್ರೀ ಅಜಿತ್ ಹೆಚ್.ಪಿ. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಬಳ್ಳಾಪುರ.
87. ಶ್ರೀ ಮಹಮ್ಮದ್ ಅಸ್ಲಂ, ಸಹಾಯಕ ನಿರ್ದೇಶಕರು, ಆಹಾರ ಮತ್ತು ನಾಗರೀಕ ಇಲಾಖೆ.
88. ಶ್ರೀ ಕೆ.ಪಿ. ಸಂಜೀವಪ್ಪ, ಕಾರ್ಯನಿರ್ವಾಹಕ ಅಧಿಕಾರಿಗಳು, ಚಿಕ್ಕಬಳ್ಳಾಪುರ ತಾಲ್ಲೂಕು.
89. ಶ್ರೀ ಕೆ. ನರಸಿಂಹಮೂರ್ತಿ, ತಹಸೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು.
90. ಶ್ರೀಮತಿ ಸುನಂದ ಎ. ಕಾರ್ಯಪಾಲಕ ಇಂಜಿನಿಯರ್, ಪಿ.ಎಂ.ಜಿ.ಎಸ್.ವೈ. ವಿಭಾಗ.
91. ಶ್ರೀ ಕೆ.ಎಸ್. ಶಿವಕುಮಾರ್, ಪ್ರಥಮ ದರ್ಜೆ ಸಹಾಯಕರು, ಉಪ ವಿಭಾಗಧಿಕಾರಿ ಕಛೇರಿ, ಚಿಕ್ಕಬಳ್ಳಾಪುರ.
92. ಶ್ರೀ ಕೆ.ಎನ್. ನಂಜುಂಡೇಗೌಡ, ಸಹಕಾರ ಸಂಘಗಳ ಉಪನಿಬಂಧಕರು, ಚಿಕ್ಕಬಳ್ಳಾಪುರ.
93. ಶ್ರೀ ಯಶಸ್ವಿನಿ ಟಿ.ಎನ್. ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ.
94. ಶ್ರೀ ಎಸ್. ಬೋರಪ್ಪ, ಹಿರಿಯ ಭೂವಿಜ್ಞಾನಿ (ಪ್ರಭಾರ) ಜಿಲ್ಲಾ ಅಂತರ್ಜಲ ಕಛೇರಿ, ಚಿಕ್ಕಬಳ್ಳಾಪುರ.
95. ಶ್ರೀ ಎಂ. ಜುಂಜಣ್ಣ, ಜಿಲ್ಲಾ ವಾರ್ತಾಧಿಕಾರಿ, ವಾರ್ತಾ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ.
96. ಶ್ರೀ ಉಮಾಕಾಂತ್, ಪೌರಾಯುಕ್ತರು, ನಗರ ಸಭೆ, ಚಿಕ್ಕಬಳ್ಳಾಪುರ.

ಪ್ಪಿದಲ್ಲಿ ಸಂಬಂಧಿಸಿದವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರು ಪ್ರತಿಕ್ರಿಯಿಸಿ ಚುನಾವಣಾ ನೀತಿ ಸಂಹಿತೆ ಇದ್ದಿದ್ದರಿಂದ ಟೆಂಡರ್ ಪ್ರಕ್ರಿಯೆ ಜರುಗಿಸಲು ಸಾಧ್ಯವಾಗಲಿಲ್ಲ. ಈಗ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲು ತೀರ್ಮಾನವಾಗಿರುತ್ತದೆ. ಆದಷ್ಟು ಶೀಘ್ರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಹೆಚ್ಚು ಸಮಸ್ಯೆ ಇರುತ್ತದೆ. ಎಸ್.ಡಿ.ಪಿ ಯೋಜನೆಯಡಿ ರೂ. 221.42 ಲಕ್ಷ ಅನುದಾನ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ನಿಗಧಿಯಾಗಿರುತ್ತದೆ. ಆಯುಕ್ತರ ಕಛೇರಿಯಲ್ಲಿ 250 ಎಲ್.ಪಿ.ಹೆಚ್. ಗಳಿಗೆ ಅನುಮೋದನೆ ನೀಡುತ್ತಿಲ್ಲ. 3 ರಿಂದ 4 ಸಣ್ಣ ಸಣ್ಣ ಗ್ರಾಮಗಳಿಗೆ ಒಂದು ಕಡೆ 1000 ಎಲ್.ಪಿ.ಹೆಚ್. ಗಳಂತೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲು ಮಾತ್ರ ಅನುಮೋದನೆ ನೀಡಲಾಗುತ್ತಿದೆ ಎಂದು ಕಾರ್ಯಪಾಲಕ ಇಂಜಿನಿಯರ್ ರವರು ತಿಳಿಸಿದಾಗ, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿಕ್ರಿಯಿಸಿ ಸಣ್ಣ ಸಣ್ಣ ಗ್ರಾಮಗಳಿಗೆ 250 ಎಲ್.ಪಿ.ಹೆಚ್ ರಂತೆ ಅನುಮೋದನೆ ನೀಡುವಂತೆ ಆಯುಕ್ತರಿಗೆ ಇಂದೇ ಪತ್ರ ಬರೆಯಲು ಸೂಚಿಸಿದರು. ಇದರಿಂದ ಸಣ್ಣ ಸಣ್ಣ ಗ್ರಾಮಗಳ ಜನತೆಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಅನುಕೂಲವಾಗುತ್ತದೆಂದು ತಿಳಿಸಿದರು.

ಕಳೆದ ವರ್ಷ ಏಪ್ರಿಲ್ ಮಾಹೆಯಲ್ಲಿ 176 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇತ್ತು. ಪ್ರಸಕ್ತ ಸಾಲಿನಲ್ಲಿ 257 ಗ್ರಾಮಗಳಲ್ಲಿ ಸಮಸ್ಯೆಯಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್ ರವರು ತಿಳಿಸಿದರು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು)**

**ನಗರ ಸ್ಥಳೀಯ ಸಂಸ್ಥೆಗಳ ಕುಡಿಯುವ ನೀರು ಸರಬರಾಜು ಯೋಜನೆ:** ಜಿಲ್ಲೆಯ ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಸದ್ಯಕ್ಕೆ ನೀರಿನ ಸಮಸ್ಯೆ ಎದುರಾಗಿರುವುದಿಲ್ಲ. ಆದರೆ ಚಿಂತಾಮಣಿ, ಶಿಡ್ಲಘಟ್ಟ ಮತ್ತು ಗೌರಿಬಿದನೂರು ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿರುತ್ತದೆ. ಚಿಂತಾಮಣಿ ಮತ್ತು ಶಿಡ್ಲಘಟ್ಟ ಪಟ್ಟಣಗಳಲ್ಲಿ 5 ಟ್ಯಾಂಕರ್‌ಗಳಿಂದ ನೀರು ಒದಗಿಸಲಾಗುತ್ತಿದೆ. ಒಟ್ಟು 48 ವಾರ್ಡ್‌ಗಳಿಗೆ ಟ್ಯಾಂಕರ್‌ನಿಂದ ನೀರು ಸರಬರಾಜು ಮಾಡಲಾಗುತ್ತಿದೆಯೆಂದು ಯೋಜನಾ ನಿರ್ದೇಶಕರು ಡಿ.ಯು.ಡಿ.ಸಿ. ರವರು ತಿಳಿಸಿದರು.

**(ಕ್ರಮ: ಎಲ್ಲಾ ಆಯುಕ್ತರು/ ಮುಖ್ಯಾಧಿಕಾರಿಗಳು)**

ಚಿಂತಾಮಣಿ ಪಟ್ಟಣಕ್ಕೆ ಅರಿಸಿಕೆರೆಯಿಂದ, ಶಿಡ್ಲಘಟ್ಟ ಪಟ್ಟಣಕ್ಕೆ ರಾಮಸಾಗರದಿಂದ ನೀರು ಸರಬರಾಜು ಮಾಡಲು ಲಭ್ಯವಿದ್ದು, ಪಟ್ಟಣದಿಂದ 19 ಕಿ.ಮೀ. ದೂರದಲ್ಲಿದ್ದು ಸಂಪರ್ಕವನ್ನು ಕಲ್ಪಿಸಲು ಕ್ರಮ ವಹಿಸಬಹುದಾಗಿದೆ. ಅದೇ ರೀತಿ ಗೌರಿಬಿದನೂರು ತಾಲ್ಲೂಕಿಗೆ ವಾಟದ ಹೊಸಹಳ್ಳಿ ಕೆರೆಯಿಂದ ನೀರಿನ ಸಂಪರ್ಕ ಕಲ್ಪಿಸಬಹುದಾಗಿದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದು ಈ ಕುರಿತು ವಿವರವಾಗಿ ಚರ್ಚಿಸಲಾಯಿತು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿಕ್ರಿಯಿಸಿ ಈ ಕುರಿತು ಕ್ರಮಹಿಸಲು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ ರವರಿಗೆ ಸದರಿ ಕೆರೆಗಳ ನೀರಿನ ಮಟ್ಟದ ವಿವರಗಳನ್ನು ಶೀಘ್ರವಾಗಿ ಸಲ್ಲಿಸಲು ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ)**

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಎಲ್ಲಾ ತಾಲ್ಲೂಕುಗಳಲ್ಲಿ ಕಲ್ಯಾಣಿಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳನ್ನು ಇಂದಿನಿಂದ ಪ್ರಾರಂಭಿಸಲಾಗಿದ್ದು, ನರೇಗಾ ಹಾಗೂ ಕೆಲವೊಂದು ಕಡೆ ಡಿ.ಎಮ್.ಎಫ್.ಟಿ ಅನುದಾನದಿಂದ ಕಾಮಗಾರಿಗಳನ್ನು ನಿರ್ವಹಿಸಲಾಗುವುದು. ಗೌರಿಬಿದನೂರು ತಾಲ್ಲೂಕಿನ ಕರೇಕಲ್ಲಹಳ್ಳಿಯಲ್ಲಿ ಇಂದು ಕಾಮಗಾರಿ ಪ್ರಾರಂಭವಾಗಿರುತ್ತದೆ. ಉಳಿದ ತಾಲ್ಲೂಕುಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲು ಸೂಚಿಸಲಾಗಿದ್ದು, ಈ ಕುರಿತು ಸಭೆಗೆ ವಿವರ ನೀಡಲು ಸೂಚಿಸಿದಾಗ ಚಿಕ್ಕಬಳ್ಳಾಪುರ ಕಾರ್ಯನಿರ್ವಾಹಕ ಅಧಿಕಾರಿಯವರು 5 ಕೆರೆಗಳಲ್ಲಿ ಹೂಳು ತೆಗೆಯಲು ಕ್ರಮ ವಹಿಸಿದೆ. 15 ಸಣ್ಣ ಕೆರೆಗಳನ್ನು ತೆಗೆದುಕೊಂಡಿದ್ದು, 35 ಮಲ್ಟಿ ಆರ್ಚ್ ಚೆಕ್‌ಡ್ಯಾಂಗಳನ್ನು ತೆಗೆದುಕೊಂಡಿರುತ್ತದೆ. ಅದೇ ರೀತಿ ಶಿಡ್ಲಘಟ್ಟ ತಾಲ್ಲೂಕಿನಲ್ಲಿ 86, ಚಿಂತಾಮಣಿ ತಾಲ್ಲೂಕಿನಲ್ಲಿ 78 ಹಾಗೂ ಬಾಗೇಪಲ್ಲಿ ತಾಲ್ಲೂಕಿನಲ್ಲಿ 76 ಮಲ್ಟಿ ಆರ್ಚ್ ಚೆಕ್‌ಡ್ಯಾಂಗಳ ಕಾಮಗಾರಿಗಳನ್ನು ತೆಗೆದುಕೊಂಡಿರುತ್ತದೆಂದು ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ತಿಳಿಸಿದರು.

**(ಕ್ರಮ: ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು)**

ಜಿಲ್ಲಾಧಿಕಾರಿಗಳು ಸದರಿ ವಿಷಯದ ಕುರಿತು ಗುಲ್ಬರ್ಗ ಜಿಲ್ಲಾ ಪಂಚಾಯತ್ ಅಧಿಕಾರಿಗಳೊಂದಿಗೆ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಂತ್ರಿಕ ಸಿಬ್ಬಂಧಿಗೆ ವಿಡಿಯೋ ಸಂವಹನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸುತ್ತಾ ಎಲ್ಲಾ ಶಾಲೆಗಳಲ್ಲಿ ಹಾಗೂ ಗ್ರಾಮಗಳಲ್ಲಿ ನೀರು ವಿನಾಕಾರಣ ಪೋಲಾಗದಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸೂಚಿಸಿದರು ಹಾಗೂ ಜಿಲ್ಲೆಯಲ್ಲಿ ಬರ ನಿರ್ವಹಣೆಗಾಗಿ ಅಧಿಕಾರಿಗಳನ್ನು ನಿಯೋಜಿಸಿರುವಂತೆ ವಿವಿಧ ಇಲಾಖಾ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ಟ್ಯಾಂಕರ್‌ಗಳಿಂದ ನೀರು ಸರಬರಾಜು ಆಗುವ ಬಗ್ಗೆ ಗ್ರಾಮಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಟ್ಯಾಂಕರ್‌ಗಳ ಟ್ರಿಫ್‌ಗಳ ಕುರಿತು ಪರಿಶೀಲಿಸಿ ಆಗಿಂದಾಗ್ಗೆ ವರದಿಗಳನ್ನು ಸಲ್ಲಿಸಲು ಕ್ರಮ ವಹಿಸುವಂತೆ ಸೂಚಿಸಿದರು. **(ಕ್ರಮ: ಜಿಲ್ಲಾಧಿಕಾರಿಗಳು)**

**ಪಶುಪಾಲನ ಮತ್ತು ಪಶುವೈದ್ಯ ಸೇವಾ ಇಲಾಖೆ:** ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡುತ್ತಾ ಜಿಲ್ಲೆಯಲ್ಲಿ 7 ವಾರಗಳಿಗೆ ಸಾಕಾಗುವಷ್ಟು 67,490 ಟನ್ ಒಣ ಮೇವು ರೈತರ ಬಳಿ ಲಭ್ಯವಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಯಾವುದೇ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. ಗೌರಿಬಿದನೂರು ತಾಲ್ಲೂಕಿನಿಂದ ಮೇವಿಗಾಗಿ ಬೇಡಿಕೆ ಬಂದಿದ್ದು, ಉಳಿದ ತಾಲ್ಲೂಕಿನಿಂದ ಪ್ರಸ್ತಾವನೆ ಸಲ್ಲಿಕೆಯಾಗಿರುವುದಿಲ್ಲ ಎಂದು ತಿಳಿಸಿದಾಗ ಮಾನ್ಯ ಜಿಲ್ಲಾಧಿಕಾರಿಗಳು ಉಳಿದ ಎಲ್ಲಾ ತಾಲ್ಲೂಕುಗಳಿಂದ ಬೇಡಿಕೆಯ ಪ್ರಸ್ತಾವನೆ ಪಡೆದು ಜರೂರು ಕ್ರಮ ವಹಿಸಲು ಸೂಚಿಸಿದರು.

ಸಮೃದ್ಧ ಮೇವು ಗೋವುಗಳ ನಲಿವು ಯೋಜನೆಯಡಿ ಕೆಲವು ಕಡೆ ಕೋಚಿಮುಲ್ ವತಿಯಿಂದ ಸ್ಥಳೀಯವಾಗಿ ರೈತರಿಂದ ಮೇವು ಬೆಳಸಿ ರೈತರಿಗೆ ನೀಡುವ ಯೋಜನೆ ಇದ್ದು, ಸದರಿ ಮೇವು 60 ದಿನಗಳೊಳಗೆ ಬೆಳೆಯಲಾಗುತ್ತಿದೆ. ಈಗಾಗಲೇ 40 ದಿನಗಳು ಕಳೆದಿದ್ದು, ಕೆಲವು ಕಡೆ ಮೇವು ಬೆಳೆಯಲಾಗಿರುತ್ತದೆ.

ಜಿಲ್ಲೆಯಲ್ಲಿ 79,716 ಮೇವಿನ ಕಿರು ಪೊಟ್ಟಣಗಳು ಅರ್ಹ ರೈತರಿಗೆ ಉಚಿತವಾಗಿ ವಿತರಿಸಿದೆ. ಸದ್ಯದಲ್ಲಿ 5075 ಮಿನಿ ಕಿಟ್ಟುಗಳು ಲಭ್ಯವಾಗುತ್ತವೆ. ದರ ಒಪ್ಪಂದ (Rate Contract) ಅವಧಿ ಮುಕ್ತಾಯಗೊಂಡಿರುತ್ತದೆ ಎಂದು ಸಭೆಗೆ ತಿಳಿಸಿದಾಗ ದರ ಒಪ್ಪಂದವನ್ನು ಮುಂದುವರೆಸಲು ಪತ್ರ ಬರೆಯಲು ಸೂಚಿಸಲಾಯಿತು.

**(ಕ್ರಮ: ಉಪ ನಿರ್ದೇಶಕರು, ಪಶುಪಾಲನ ಮತ್ತು ಪಶುವೈದ್ಯ ಸೇವಾ ಇಲಾಖೆ)**

**ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:** ಸಹಾಯಕ ನಿರ್ದೇಶಕರು ಈ ಕುರಿತು ಮಾಹಿತಿ ನೀಡುತ್ತಾ ಸರ್ಕಾರದಿಂದ ಅನುದಾನ ಬಿಡುಗಡೆಯಾಗುತ್ತಿಲ್ಲ. ಜಿಲ್ಲೆಯಲ್ಲಿ 297 ಕಾಮಗಾರಿಗಳು ನಡೆಯುತ್ತಿರುತ್ತವೆ. 29 ಕಾಮಗಾರಿಗಳು ಹೂಳು ತೆಗೆಯುವ ಕಾಮಗಾರಿಗಳು ಪ್ರಾರಂಭವಾಗಿವೆ. ಕೂಲಿಕಾರರ ಕೂಲಿ ಹಣ ಬಾಕಿ ಉಳಿದಿದ್ದು, ಕಳೆದ ಸಾಲಿನ ಕೂಲಿ ಮೊತ್ತ ರೂ. 5 ಕೋಟಿ ಅನುದಾನ ಬಿಡುಗಡೆಯಾಗಬೇಕಾಗಿದೆ. ಪ್ರಸಕ್ತ ಸಾಲಿನ ಮೊತ್ತ ರೂ. 22 ಕೋಟಿ ಅನುದಾನ ಬಿಡುಗಡೆಯಾಗಬೇಕಾಗಿದೆ. ಈ ಪೈಕಿ ಕೂಲಿ ಹಣ ರೂ. 5 ಕೋಟಿ ಹಾಗೂ ರೂ. 17 1/2 ಕೋಟಿ ಸಾಮಗ್ರಿಗಳ ಹಣ ಬಿಡುಗಡೆಯಾಗಬೇಕಾಗಿದೆ. ಜಿಲ್ಲೆಯಲ್ಲಿ 5729 ಕುಟುಂಬಗಳು ಕೆಲಸ ಮಾಡುತ್ತಿವೆ. ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ರೂ. 1.60 ಕೋಟಿ ಕೂಲಿ ಬಾಬ್ತು ಬಿಡುಗಡೆಯಾಗಬೇಕಾಗಿದೆಯೆಂದು ಸಭೆಗೆ ತಿಳಿಸಿದಾಗ ಈ ಕುರಿತು ಜಿಲ್ಲೆಗೆ ಸಂಬಂಧಿಸಿದಂತೆ ಸಂಪೂರ್ಣ ವರದಿ ಸಲ್ಲಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. **(ಕ್ರಮ: ಉಪ ಕಾರ್ಯದರ್ಶಿ)**

**ಶಿಕ್ಷಣ ಇಲಾಖೆ:** 2019-20ನೇ ಸಾಲಿಗೆ ಶಾಲೆಗಳಲ್ಲಿ ತರಗತಿಗಳನ್ನು ದಿನಾಂಕ: 28.05.2019 ರಿಂದ ಪ್ರಾರಂಭಿಸಲಾಗುವುದು. ಶಾಲಾ ಮಕ್ಕಳಿಗೆ ಸರ್ಕಾರದಿಂದ ಶೇ. 45% ರಷ್ಟು ಸಮ ವಸ್ತ್ರ ಸರಬರಾಜಾಗಿರುತ್ತದೆ. ಶಾಲಾ ಕಟ್ಟಡಗಳಿಗೆ ಸಣ್ಣ ಪುಟ್ಟ ದುರಸ್ಥಿಗಳಾಗಬೇಕಾಗಿದೆ. ಜಿಲ್ಲೆಯಲ್ಲಿ 270 ಶಾಲೆಗಳ ಪಟ್ಟಿ ಸಿದ್ಧಪಡಿಸಿದೆಯೆಂದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿಕ್ರಿಯಿಸಿ ಹಾಲಿ ಶಾಲಾ ಮಕ್ಕಳಿಗೆ ರಜೆ ನೀಡಿರುವುದರಿಂದ ಎಲ್ಲಾ ಶಾಲೆಗಳಿಗೆ ಹಾಗೂ ಹಾಸ್ಟೆಲ್‌ಗಳಿಗೆ ಸುಣ್ಣ ಬಣ್ಣ ಬಳಿಯುವುದು, ಸಣ್ಣ ಪುಟ್ಟ ದುರಸ್ಥಿಗೊಳಿಸುವುದು, ಕುಡಿಯುವ ನೀರು, ವಿದ್ಯುತ್ ರಿಪೇರಿ ಇತ್ಯಾದಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಇತ್ತೀಚಿನ ಲೋಕಸಭಾ ಚುನಾವಣಾ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಶಾಲೆಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ನಿರ್ವಹಿಸಲಾಗಿದೆಯೆಂದು ತಿಳಿಸಿದರು.

ಶಿಕ್ಷಣಾಧಿಕಾರಿಗಳು ತಿಳಿಸುತ್ತಾ ಜಿಲ್ಲೆಯಲ್ಲಿ 1400 ಶಾಲೆಗಳಲ್ಲಿ ಬಿಸಿಯೂಟ ಕಾರ್ಯಕ್ರಮ ನಡೆಯುತ್ತಿದ್ದು, ಶೇ. 30 ರಂದ 40 ರವರೆಗೆ ಮಕ್ಕಳ ಹಾಜರಾತಿ ಇರುತ್ತದೆಂದು ತಿಳಿಸಿದರು.

**(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ)**

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:** ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳನ್ನು ಕೆಲವು ಕಡೆ ಬಾಡಿಗೆ ಕಟ್ಟಡಗಳಲ್ಲಿ ಕೆಲವು ಕಡೆ ಸ್ವಂತ ಕಟ್ಟಡಗಳಲ್ಲಿ, ಸರ್ಕಾರಿ ಶಾಲಾ ಕಟ್ಟಡಗಳಲ್ಲಿ ನಡೆಯುತ್ತಿರುತ್ತವೆ. ಅಂಗವಾಡಿ ಕಟ್ಟಡಗಳು 423 ಆಗಬೇಕಾಗಿದೆ, 104 ಅಂಗನವಾಡಿ ಕೇಂದ್ರಗಳ ಕಟ್ಟಡಗಳು ನಡೆಯುತ್ತಿರುತ್ತವೆ. ಗ್ರಾಮೀಣ ಭಾಗದಲ್ಲಿ ಕಟ್ಟಡಗಳು ಬಾಡಿಗೆಗೆ ದೊರೆಯುತ್ತವೆ. ಪಟ್ಟಣಗಳಲ್ಲಿ ಬಾಡಿಗೆಗೆ ದೊರೆಯುವುದು ಸ್ವಲ್ಪ ಸಮಸ್ಯೆ ಇರುತ್ತದೆ ಎಂದು ಉಪ ನಿರ್ದೇಶಕ ರವರು ತಿಳಿಸಿದಾಗ ಎಲ್ಲಾ ಕಡೆ ಸ್ವಂತ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸಲು ಸೂಚಿಸಿದರು. ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಎಸ್.ಎಚ್.ಜಿ ಗಳಿಂದ ಮಾಡಿಸಲು ಕ್ರಮ ವಹಿಸಲಾಗುತ್ತಿದ್ದು, ತರಭೇತಿ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ 292 ಅಪೌಷ್ಠಿಕ ಮಕ್ಕಳು ಇರುತ್ತಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಿಂದ ಮತ್ತು ಆಶಾ ಕಾರ್ಯಕರ್ತೆಯರಿಂದ ಉತ್ತಮ ಸಹಕಾರ ದೊರಕುತ್ತಿದೆಯೆಂದು, ಮಕ್ಕಳಿಗೆ ನ್ಯೂಟ್ರೀಷನ್ ಬಗ್ಗೆ ತಿಳಿಸಿ ಹಾಲು ಮೊಟ್ಟೆ, ಮೊಳಕೆ ಕಾಳು ನೀಡುತ್ತಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳನ್ನು ಸ್ವಚ್ಛವಾಗಿ ಸಿದ್ಧಮಾಡಿ ಚೆನ್ನಾಗಿ ಕಳುಹಿಸುವ ಪೋಷಕರಿಗೆ ಹಾಗೂ ಮಕ್ಕಳಿಗೆ ಬಹುಮಾನ ನೀಡಲು ಸೂಚಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಗ್ರಾಮ ಪಂಚಾಯಿತಿಗಳಲ್ಲಿ ಸಮಿತಿಗಳನ್ನು ರಚಿಸಿರುತ್ತಾರೆ. ಅವುಗಳ ಮುಖಾಂತರ ಉತ್ತಮವಾಗಿ ನಡೆಸಲು ಸೂಚನೆಗಳನ್ನು ನೀಡುವುದು ಸೇರಿದಂತೆ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಲು ಸೂಚಿಸಿದರು. **(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು)**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:** ಜಿಲ್ಲೆಯಲ್ಲಿ 32 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ 348 ಬಾಲಕರು ಹಾಗೂ 99 ಬಾಲಕಿಯರು ಒಟ್ಟು 447 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಆ ಪೈಕಿ 406 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಒಟ್ಟಾರೆ ಶೇ.90 ರಷ್ಟು ಫಲಿತಾಂಶ ಬಂದಿದೆ. 41 ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುತ್ತಾರೆ. 3ನೇ ದರ್ಜೆಯಲ್ಲಿ 48 ವಿದ್ಯಾರ್ಥಿಗಳು, ಶೇ 60ಕ್ಕೆ ಮೇಲ್ಪಟ್ಟ 70, ಶೇ 70ಕ್ಕೆ ಮೇಲ್ಪಟ್ಟ 147 ಹಾಗೂ ಶೇ. 80ಕ್ಕೆ ಮೇಲ್ಪಟ್ಟ 141 ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಗಳಿಸಿರುತ್ತಾರೆ. ಹಾಗೂ ಜಿಲ್ಲೆಯಲ್ಲಿ ಹಾಸ್ಟೆಲ್‌ಗಳು ಉತ್ತಮವಾಗಿ ಜರುಗುತ್ತಿವೆಯೆಂದು ತಿಳಿಸಿದರು.

**(ಕ್ರಮ: ಜಿಲ್ಲಾ ಅಧಿಕಾರಿವ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)**

**ಸಮಾಜ ಕಲ್ಯಾಣ ಇಲಾಖೆ:** ಜಿಲ್ಲೆಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಮಾರ್ಚ್–2019ರಲ್ಲಿ ನಡೆದ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳ ವಿವರದ ಕುರಿತು ತಿಳಿಸುತ್ತಾ ಪರೀಕ್ಷೆಗೆ ಹಾಜರಾದ ಒಟ್ಟು 418, ಶೇ. 85 ಕ್ಕಿಂತ ಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿಗಳು 32, ಪ್ರಥಮ ದರ್ಜೆ 137, ದ್ವಿತೀಯ ದರ್ಜೆ 60, ತೃತೀಯ ದರ್ಜೆ 40 ಈ ರೀತಿಯಾಗಿ ಒಟ್ಟು ತೇರ್ಗಡೆಯಾದ ವಿದ್ಯಾರ್ಥಿಗಳು 269 ಇದ್ದು, ಶೇಕಡವಾರು 64 ರಂತೆ ಉತ್ತೀರ್ಣರಾಗಿರುತ್ತಾರೆ. ಪಿ.ಯು.ಸಿ.ನಲ್ಲಿ ಟ್ಯೂಷನ್ ಇರುವುದಿಲ್ಲ. ಅನೇಕರು ಕನ್ನಡ ವಿಷಯದಲ್ಲಿ ಅನುತ್ತೀರ್ಣರಾಗಿರುತ್ತಾರೆಂದು ತಿಳಿಸಿದರು. ಮುರಾರ್ಜಿ ದೇಸಾಯಿ ಶಾಲೆಯನ್ನು ಕಳೆದ ವರ್ಷ ತೆರೆದಿದ್ದು, 10 ಜನಕ್ಕೆ 7 ಜನ ಉತ್ತೀರ್ಣರಾಗಿರುತ್ತಾರೆಂದು ಉಪ ನಿರ್ದೇಶಕರ ಪರವಾಗಿ ಹಾಜರಿದ್ದ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

**(ಕ್ರಮ: ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ)**

**ಸಾಮಾಜಿಕ ಅರಣ್ಯ ಇಲಾಖೆ:** ಜಿಲ್ಲೆಯಲ್ಲಿ ನರ್ಸರಿ ರೈಸ್ ಮಾಡಿದ್ದು, 570 ಹೆಕ್ಟೇರ್‌ನಲ್ಲಿ ಸಸಿ ನೆಡಲಾಗಿದೆ. ನರೇಗಾದಡಿ ರಸ್ತೆ ಬದಿ ಗಿಡ ನೆಡಸಿದೆ. ನೀರಿಗೆ ಬಹಳ ಕೊರತೆಯಾಗಿದೆ. 11ಲಕ್ಷ ಸಸಿ ಬೆಳೆಸಿದೆಯೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿ ರವರು ಮಾತನಾಡಿ ಜಿಲ್ಲೆಗೆ 1 ಕೋಟಿ ಗಿಡ ಬೆಳೆಸಲು ಗುರಿಯನ್ನು ಸಾಮಾಜಿಕ ಹಾಗೂ ಪ್ರಾದೇಶಿಕ ಅರಣ್ಯ ಇಲಾಖೆಗಳವರಿಗೆ ನಿಗಧಿಪಡಿಸಿದೆ. ಕೆರೆಗಳ ಅಂಗಳ ಪ್ರದೇಶಗಳಲ್ಲಿ ಹೆಚ್ಚು ಗಿಡ ನೆಡಲು ತಿಳಿಸಿದರು. ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಪತ್ರ ಬರೆದು ಹೆಚ್ಚಿನ ಅನುದಾನ ಕೋರಲು ಸೂಚಿಸಿದರು. ನೀಲಗಿರಿ ಮರಗಳಿಗೆ ಪ್ರತಿಯಾಗಿ ಬೇರೆ ಮರಗಳನ್ನು ಬೆಳೆಸಬೇಕು. ಈ ಜಿಲ್ಲೆಗೆ ಯಾವ ಯಾವ ಮರಗಳ ಅವಶ್ಯಕತೆ ಇದೆ ಎಂಬ ಬಗ್ಗೆ ತಿಳಿದು ಯೋಜನೆ ರೂಪಿಸಲು ಸೂಚಿಸಿದರು. ಈಗಾಗಲೇ ರೋಟರಿಯವರೊಂದಿಗೆ ಸಭೆ ನಡೆಸಿದೆ. ಗ್ರಾಮ ಪಂಚಾಯಿತಿಗಳಿಂದ 30 ಲಕ್ಷ ಸಸಿಗಳಿಗೆ ಬೇಡಿಕೆ ಬಂದಿರುತ್ತದೆ ಎಂದು ತಿಳಿಸಿದರು. ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿರಿಯವರು ಪೂರ್ವಾನುಮತಿ ಪಡೆಯದೆ ಸಭೆಗೆ ಗೈರು ಹಾಜರಾಗಿರುವುದಕ್ಕೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ: ಮುಖ್ಯ ಯೋಜನಾಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿರವರು)**

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ರವರು ತಿಳಿಸುತ್ತಾ ಜಿಲ್ಲೆಯಲ್ಲಿ ಇಮ್ಯೈಜೇಷನ್ 102% ಆಗಿದೆ. ಕೆಲವೊಂದು ಆಸ್ಪತ್ರೆಗಳಲ್ಲಿ ದೂರುಗಳಿದ್ದು, ಮಧ್ಯವರ್ತಿಗಳ ಹಾವಳಿ ಇರುತ್ತದೆ. ಈ ಕುರಿತು ಪಟ್ಟಿ ಸಿದ್ಧಪಡಿಸಿದ್ದು ಕ್ರಮ ವಹಿಸಲಾಗುವುದು, ಆಸ್ಪತ್ರೆಯಲ್ಲಿ ಬಿಸಿ ನೀರಿಗೆ 2 ಸೋಲಾರ್ ಇದೆ. ಐ.ಸಿ.ಯು ಕಾರ್ಯನಿರ್ವಸುತ್ತಿದೆ. ಅಳೆಯ ಆಸ್ಪತ್ರೆಯ ಕಟ್ಟಡವನ್ನು ಪ್ರತ್ಯೇಕವಾಗಿ ಹೆರಿಗೆ ಆಸ್ಪತ್ರೆಗಾಗಿ ಉಪಯೋಗಿಸಲು ಯೋಜನೆ ರೂಪಿಸಿದೆ. ಆಸ್ಪತ್ರೆಗಳಲ್ಲಿ ಪ್ರತಿ ದಿನ 3 ಬಾರಿ ಸ್ವಚ್ಛತೆ ಮಾಡುತ್ತಿದೆ. ಆರೋಗ್ಯ ರಕ್ಷಾದಡಿ ರೂ. 29 ಲಕ್ಷ ಖರ್ಚಾಗಿದೆಯೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲಾಸ್ಪತ್ರೆಯಲ್ಲಿ ಸ್ವಚ್ಛತೆ, ಕುಡಿಯುವ ನೀರು ಮತ್ತು ಬಿಸಿ ನೀರಿನ ಸಮಸ್ಯೆ ಹೆಚ್ಚಾಗಿರುವ ಜತೆಗೆ ಮಧ್ಯವರ್ತಿಗಳ ಹಾವಳಿ ಇರುವ ದೂರುಗಳ ಬಗ್ಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆಯ ಅಧಿಕಾರಿಗಳ ಸಹಕಾರ ಪಡೆಯಬೇಕು. ಪ್ರತಿ ವಾರ್ಡಿಗೆ ಕುಡಿಯುವ ನೀರು, ಬಿಸಿ ನೀರು ಒದಗಿಸಬೇಕು. ಸಾಕಾಗುವಷ್ಟು ಬಿಸಿ ನೀರಿಗೆ ಸೋಲಾರ್ ಹಾಕಿಸಬೇಕು. ಶುಚಿತ್ವದ ಕಡೆಗೆ ಹೆಚ್ಚು ಗಮನ ಹರಿಸಬೇಕು, ಟಿ.ವಿ ಗಳನ್ನು ಅಳವಡಿಸಬೇಕು, ಬೇಡಿಕೆಗನುಗುಣವಾಗಿ ಔಷಧಿಗಳನ್ನು ಖರೀದಿಸಬೇಕು ಎಂದು ಸೂಚಿಸಿದರು. **(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)**

**ಲೋಕೋಪಯೋಗಿ ಇಲಾಖೆ:** ಲೆಕ್ಕ ಶೀರ್ಷಿಕೆ-5054 ರಡಿ ಜಿಲ್ಲಾ ಮತ್ತು ಇತರೆ ರಸ್ತೆಗಳು-ಸುಧಾರಣೆರಡಿ 57 ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, 57 ಕಾಮಗಾರಿಗಳನ್ನು ಪ್ರಾರಂಭಿಸಿದ್ದು, ಈಗಾಗಲೇ 43 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. ಉಳಿದ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ, ಹಾಲಿ 40 ಕಾಮಗಾರಿಗಳು ಇತ್ತೀಚೆಗೆ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಜರುಗಿಸಬೇಕಾಗಿದೆ, ರೂ.5 ಕೋಟಿ ಕಾಮಗಾರಿಗಳನ್ನು, ಗೌರಿಬಿದನೂರಿನಲ್ಲಿ ಹಾಗೂ ಚಿಕ್ಕಬಳ್ಳಾಪುರ ನಗರದಲ್ಲಿ ನ್ಯಾಯಾಲಯ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆಯೆಂದು ಕಾರ್ಯಪಾಲಕ ಇಂಜಿನಿಯರ್ ರವರು ಸಭೆಗೆ ಮಾಹಿತಿ ನೀಡಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಸೂಚಿಸುತ್ತಾ ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಸುವ ಸಲುವಾಗಿ ಹಾಗೂ ಜಿಲ್ಲೆಯ ಅಭಿವೃದ್ದಿಗಾಗಿ ಪ್ರವಾಸೋಧ್ಯಮ ಇಲಾಖೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಹಾಗೂ ಪ್ರತ್ಯೇಕವಾಗಿ ಪ್ರವಾಸೋದ್ಯಮ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಗುವುದೆಂದು ತಿಳಿಸಿದರು.

ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕಟ್ಟಡಗಳ ನಿರ್ಮಾಣಕ್ಕಾಗಿ ರೂ. 10.26 ಲಕ್ಷಗಳಂತೆ 126 ಲಕ್ಷಗಳು ಮಂಜೂರಾಗಿದ್ದು, ಟೆಂಡರ್ ಕರೆಯಲಾಗಿದೆಯೆಂದು ಕಾರ್ಯನಿರ್ವಾಹಕ ಅಭಿಯಂತರ ರವರು ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಈ ಸಂದರ್ಭದಲ್ಲಿ ಸೂಚಿಸುತ್ತಾ ಬಿಡುಗಡೆಯಾದ ಅನುದಾನದಲ್ಲಿ ಬರೀ ಕಟ್ಟಡ ನಿರ್ಮಿಸುವುದು ಮಾತ್ರವಲ್ಲದೆ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಅವಶ್ಯಕವಾದ ಪೀಠೋಪಕರಣ, ನೀರಿನ ವ್ಯವಸ್ಥೆ ಎಲ್ಲಾ ಕಲ್ಪಿಸಬೇಕು ಎಂದಾಗ ಮಾನ್ಯ ಜಿಲ್ಲಾಧಿಕಾರಿಯವರು ಪ್ರತಿಕ್ರಿಯಿಸಿ ಸಂಬಂಧಿಸಿದವರು ಅವಶ್ಯಕ ಸಾಮಗ್ರಿಗಳಿಗೆ ಬೇಡಿಕೆ ಸಲ್ಲಿಸಿದರೆ ಡಿ.ಎಮ್.ಎಫ್.ಟಿ. ನಿಧಿಯಿಂದ ಅನುದಾನ ಒದಗಿಸಲಾಗುವುದು, ಈ ಕುರಿತು ಇಲಾಖಾ ಮುಖ್ಯಸ್ಥರುಗಳು ಸೂಕ್ತ ಕ್ರಮ ವಹಿಸಲು ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ)**

**ಜಿಲ್ಲಾ ಕೈಗಾರಿಕಾ ಕೇಂದ್ರ:** ಇಲಾಖಾಧಿಕಾರಿಗಳು ತಿಳಿಸುತ್ತಾ 2018–19ನೇ ಸಾಲಿಗೆ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆಯಡಿ 241 ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ಜಿಲ್ಲೆಯಲ್ಲಿನ ವಿವಿಧ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಲಾಗಿದೆಯೆಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿಕ್ರಿಯಿಸಿ ಬೆಂಗಳೂರಿನ ಎಲೆಕ್ಟ್ರಾನಿಕ್‌ಸಿಟಿ ಹಾಗೂ ವೈಟ್ ಫೀಲ್ಡ್ ನಲ್ಲಿ ಹೆಚ್ಚು ಹೆಚ್ಚು ಉದ್ಯೋಗ ಅವಕಾಶಗಳಿರುವಂತೆ ಜಿಲ್ಲೆಯಲ್ಲಿ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಸೃಜಿಸಲು ಜಮೀನು ಗುರ್ತಿಸಲು ಸೂಚಿಸಿದರು. ಹಾಗೂ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಹಾರ್ಡ್‌ವೇರ್ ಇಂಡಸ್ಟ್ರೀ ತೆರೆದು ಉದ್ಯೋಗ ಸೃಷ್ಠಿಸಲು ತಿಳಿಸಿದರು. ಜಂಟಿ ನಿರ್ದೇಶಕರು ಮಾಹಿತಿ ನೀಡುತ್ತಾ ಬಾಗೇಪಲ್ಲಿ ತಾಲ್ಲೂಕಿನಲ್ಲಿ 200 ಎಕರೆ ಭೂಮಿ ಇರುತ್ತದೆ. ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆ ಗ್ರಾಮದಲ್ಲಿ ಉದ್ಯೋಗ ಸೃಷ್ಠಿಗಾಗಿ ಕ್ರಮ ವಹಿಸಲಾಗಿದೆಯೆಂದರು.
**(ಕ್ರಮ: ಜಂಟಿ ನಿರ್ದೇಶರು, ಜಿಲ್ಲಾ ಕೈಗಾರಿಕಾ ಕೇಂದ್ರ)**

ಸಭೆಯ ಮುಕ್ತಾಯದಲ್ಲಿ ಮಾನ್ಯ ಜಿಲ್ಲಾಧಿಕಾರಿ ರವರು ಮಾತನಾಡಿ ಇಂದಿನ ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ನೀಡಿರುವ ಸಲಹೆ ಸೂಚನೆಗಳನ್ನು ತಪ್ಪದೇ ಪಾಲಿಸಿ ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಅನುಪಾಲನಾ ವರದಿಗಳನ್ನು ಶೀಘ್ರವಾಗಿ ಸಲ್ಲಿಸಲು ಸೂಚಿಸಲಾಗಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಡಾ:ಎನ್.ನಾಗಾಂಭಿಕಾದೇವಿ, ಭಾ.ಆ.ಸೇ.)

**ಪ್ರಧಾನ ಕಾರ್ಯದರ್ಶಿಗಳು ಸಹಕಾರ ಇಲಾಖೆ ಹಾಗೂ**
**ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು**

**ಸಂಖ್ಯೆ/ಜಿಪಂ.ಚಿ.ಪುರ/ತ್ರೈ.ಕೆ.ಡಿ.ಪಿ.ಸಭೆ. 1/ನಡವಳಿ/19-20** **ದಿನಾಂಕ :**

**ಪ್ರತಿಯನ್ನು:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರವರ ಮಾಹಿತಿಗಾಗಿ.
2) ಪ್ರಾದೇಶಿಕ ಆಯುಕ್ತರು, ಕೆ.ಎಚ್.ರಸ್ತೆ. ಕೆ.ಎಸ್.ಆರ್.ಟಿ.ಸಿ. ಕಟ್ಟಡ 2ನೇ ಮಹಡಿ, ಬೆಂಗಳೂರು ರವರ ಮಾಹಿತಿಗಾಗಿ.
3) ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪ್ಪರ ರವರ ಮಾಹಿತಿಗಾಗಿ.
4) ಜಿಲ್ಲೆಯ ಸಂಬಂಧಿಸಿದ ಇಲಾಖೆಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ರವಾನಿಸುತ್ತಾ ಪಾಲನಾ ವರದಿಯನ್ನು ಶೀಘ್ರವಾಗಿ ಸಲ್ಲಿಸಲು ಸೂಚಿಸಿದೆ.

**ದಿನಾಂಕ: 03.04.2019 ರಂದು ಅಪರಾಹ್ನ 1.00 ಗಂಟೆಗೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ಅಂಜುಮ್ ಪರ್ವೇಜ್‌ರವರ ಅಧ್ಯಕ್ಷತೆಯಲ್ಲಿ ಜರುಗಿದ ಬರಪರಿಹಾರ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಈ ಕೆಳಕಂಡ ಇಲಾಖೆಯ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಿದರು.

1. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ;-

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಪ್ರಗತಿ ಪರಿಶೀಲನಾ ಸಂಧರ್ಭದಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ ಮುಂದುವರೆದ ಕಾಮಗಾರಿಗಳ ಪೈಕಿ 210 ರಲ್ಲಿ 208 ಕಾಮಗಾರಿಗಳು ಪೂರ್ಣಗೊಂಡಿರುವುದು ಹಾಗೂ ಹೊಸ ಕಾಮಗಾರಿಗಳು 631ರ ಪೈಕಿ 508 ಪೂರ್ಣಗೊಂಡಿರುವುದಾಗಿ ಕಾರ್ಯಪಾಲಕ ಅಭಿಯಂತರವರು ಸಭೆಗೆ ತಿಳಿಸಿದರು ಅಧ್ಯಕ್ಷರು ಉಳಿಕೆ ಕಾಮಗಾರಿಗಳನ್ನು ಸಹ ಬರದ ಹಿನ್ನಲೆಯಲ್ಲಿ ಪೂರ್ಣಗೊಳಿಸಬೇಕೆಂದು ನಿರ್ದೇಶಿಸಿದರು. ತುಂಡುಗುತ್ತಿಗೆಗಳನ್ನು ಒಟ್ಟಾರೆ 589 ನೀಡಲಾಗಿದ್ದು ವಿವರವಾದ ಪಟ್ಟಿಯನ್ನು ಪಡೆದು Pooling ಆಗಿರುವ ಬಗ್ಗೆ ಪರಿಶೀಲಿಸಬೇಕೆಂದು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಆದೇಶಿಸಿದರು. ಅಲ್ಲದೇ ಟೆಂಡರ್ ಪ್ರಕ್ರಿಯೆಯಲ್ಲಿ ಅದರಲ್ಲೂ OHT ಕಾಮಗಾರಿಗಳಿಗೆ ಪ್ರತಿಕ್ರಿಯೆ ತೋರುತ್ತಿಲ್ಲವೆಂದು ಗಮನ ಸೆಳೆದಾಗ ಪರಿಷ್ಕೃತ ದರಪಟ್ಟಿ ಅನುಮೋದನೆ ಬಗ್ಗೆ ಚರ್ಚಿಸಿ ಕೂಡಲೇ ಕ್ರಮ ವಹಿಸಬೇಕೆಂದು ಸೂಚಿಸಿದರು.

2018-19ನೇ ಟಾಸ್ಕ್ ಫೋರ್ಸ್ ಅಡಿಯಲ್ಲಿ ರೂ.250.00 ಲಕ್ಷಗಳ ಕ್ರಿಯಾಯೋಜನೆ ಅನುಮೋದನೆಯಾಗಿದ್ದು, ರೂ. 125.00 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 122.08 ಲಕ್ಷಗಳು ವೆಚ್ಚವಾಗಿರುವ ಬಗ್ಗೆ ವಿವರ ಪಡೆದು ಕೂಡಲೇ ಉಳಿಕೆ ಹಣ ಬಿಡುಗಡೆಗಾಗಿ ಕ್ರಮವಹಿಸಬೇಕೆಂದು ಹಾಗೂ ಎಲ್ಲಾ ಕಾಮಗಾರಿಗಳನ್ನು 15 ದಿನದ ಅವಧಿಯೊಳಗೆ ಪೂರ್ಣಗೊಳಿಸಬೇಕೆಂದು ಸೂಚಿಸಿದರು. ಪ್ರಕೃತಿ ವಿಕೋಪ ಅನುದಾನದಡಿ ಒಟ್ಟು 66 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಅಂದಾಜು ಮೊತ್ತ ರೂ. 99.00 ಲಕ್ಷಗಳಾಗಿರುತ್ತದೆ. ಇವುಗಳಲ್ಲಿ 41 ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸುತ್ತಾ, ಸದರಿ ಕಾಮಗಾರಿಗಳು ಸಣ್ಣ ಪುಟ್ಟ ಕಾಮಗಾರಿಗಳಾಗಿದ್ದು, 1 ವಾರದೊಳಗೆ ಪೂರ್ಣಗೊಳಿಸಬೇಕೆಂದು ನಿರ್ದೇಶನ ನೀಡಿದರು ಹಾಗೂ ವೆಚ್ಚವನ್ನು ಭರಿಸಲು ಸೂಚಿಸಿದರು. ತುರ್ತು ಕುಡಿಯುವ ನೀರು ಸೌಲಭ್ಯ ಕಲ್ಪಿಸಲು ದಿನಾಂಕ 08.03.2019ರ ಆದೇಶದಂತೆ ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿ ರವರಿಗೆ ಬಿಡುಗಡೆಯಾದ ಅನುದಾನಕ್ಕೆ 4 ದಿನಗಳಲ್ಲಿ ಕ್ರಿಯಾಯೋಜನೆ ತಯಾರಿಸಿ ಅನುಮೋದನೆ ಪಡೆಯಬೇಕೆಂದು ಸೂಚಿಸಿದರು.

ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ 624ರ ಪೈಕಿ 614 ಕಾರ್ಯಾಚರಣೆಯಲ್ಲಿದ್ದು. ಉಳಿದ 10ರ ಪೈಕಿ 3 ಘಟಕಗಳನ್ನು Shifting ಮಾಡಬೇಕಾಗಿರುವುದು । ವಿದ್ಯುತ್ ಸರಬರಾಜು ಕಡಿತಗೊಂಡಿದೆ ಎಂದು ಉಳಿದವುಗಳನ್ನು KRIDL ರವರು ಕಾರ್ಯಾಚರಣೆ ತರಲು ಸೂಚಿಸಿ ಈಗಾಗಲೇ ಸರ್ಕಾರದಿಂದ ಆದೇಶದ ಮೇರೆಗೆ ಜೂನ್ 2019ರ ವರೆಗೆ KRIDL ರವರು ನಿರ್ವಹಿಸಲು ಕ್ರಮ ವಹಿಸಬೇಕೆಂದು ಸೂಚಿಸಿದರು.

ಆನೇಕಲ್ ತಾಲ್ಲೂಕಿನ 4 ಗ್ರಾಮ ಪಂಚಾಯತಿಗಳಡಿ ಬರುವ 11 ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಬಗ್ಗೆ ಪರಿಶೀಲಿಸಿ ಹತ್ತಿರದಲ್ಲಿ ಯಾವುದಾದರೂ ಖಾಸಗಿ ಬೋರ್‌ವೆಲ್‌ಗಳನ್ನು ಸರ್ಕಾರಿ ಆದೇಶದನ್ವಯ ಬಾಡಿಗೆಗೆ ಪಡೆದು ಆದ್ಯತೆ ಮೇರೆಗೆ ಕುಡಿಯುವ ನೀರು ಸರಬರಾಜು ಮಾಡಬೇಕೆಂದು ಸೂಚಿಸಿದರು. ಈ ಬಗ್ಗೆ ಪ್ರತ್ಯೇಕ ಸಹಾಯವಾಣಿ ತೆರೆದು ಕಾರ್ಯನಿರ್ವಹಿಸಬೇಕೆಂದು ಹಾಗೂ ವ್ಯಾಪಕ ಪ್ರಚಾರ ನೀಡಬೇಕೆಂದು ಸೂಚಿಸಿದರು.

ಅನುದಾನ ಬಿಡುಗಡೆ ಮತ್ತು ವೆಚ್ಚ ಪರಿಶೀಲಿಸಿ ಪ್ರಗತಿ ತೃಪ್ತಿಕರವಾಗಿದ್ದು ಎಲ್ಲಾ ಕೈಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಬೇಕೆಂದು ಸೂಚಿಸಿದರು. (ಕ್ರಮ:-ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ)

## 2. ಕೃಷಿ ಇಲಾಖೆ:-

ಮಳೆ ವಿವರಗಳು:-

1. ಮಳೆ ವಿವರಗಳು :-
2. 2018 ರಲ್ಲಿ ಜನವರಿ 01.01.2018 ರಿಂದ 31.12.2018 ರವರೆಗೆ 855ಮಿ.ಮೀ. ವಾಡಿಕೆ ಮಳೆಗೆ 768 ಮಿ.ಮೀ. (ಶೇ.-10) ವಾಸ್ತವ ಮಳೆ ಪಡೆಯಲಾಗಿದೆ.
3. 2019 ರಲ್ಲಿ ಜನವರಿ 01.01.2019 ರಿಂದ 31.03.2019 ರವರೆಗೆ 17.6 ಮಿ.ಮೀ. ವಾಡಿಕೆ ಮಳೆಗೆ 7.8 ಮಿ.ಮೀ. ವಾಸ್ತವ ಮಳೆ ಪಡೆಯಲಾಗಿದೆ.
4. ಬೆಳೆ ವಿಸ್ತೀರ್ಣ :-
   - 2018-19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನೊಳಗೊಂಡಂತೆ ಒಟ್ಟಾರೆ 23025 ಹೆ.ವಿಸ್ತೀರ್ಣದ ಗುರಿಗೆ 14734 ಹೆ.ವಿಸ್ತೀರ್ಣದಲ್ಲಿ (ಶೇ.64%) ಮುಖ್ಯವಾಗಿ ರಾಗಿ ಬೆಳೆಯಲ್ಲಿ 11705 ಹೆ. ತೊಗರಿ ಬೆಳೆಯಲ್ಲಿ 593 ಹೆ. ಮುಸುಕಿನ ಜೋಳ ಬೆಳೆಯಲ್ಲಿ 708 ಹೆ. ಅಲಸಂದೆ ಬೆಳೆಯಲ್ಲಿ 206 ಹೆ ಹಾಗೂ ಎಣ್ಣೆ ಕಾಳು ಬೆಳೆಗಳಲ್ಲಿ 277 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.

- ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳಲ್ಲಿ ಗಣನೀಯವಾಗಿ ಶೇ.37,2,57, ಮತ್ತು 92ರಷ್ಟು ಕಡಿಮೆ ಮಳೆಯನ್ನು ಪಡೆದಿದ್ದು, ತೇವಾಂಶದ ಕೊರತೆಯಿಂದ ಬೆಳೆ ಕುಂಠಿತವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಕಂಇ/186 ಟಿ.ಎನ್.ಆರ್.2018 ದಿನಾಂಕ: 25.09.2018 ಹಾಗೂ ದಿನಾಂಕ: 12.10.2018 ರಂದು ನಡೆದ ಸಚಿವ ಸಂಪುಟದ ಉಪ ಸಮಿತಿ ಸಭೆಯ ತ್ರೀರ್ಮಾನದಂತೆ (ಆನೇಕಲ್ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿದ್ದು, ದಿನಾಂಕ: 14.11.2018 ರಂತೆ ಆನೇಕಲ್ ತಾಲ್ಲೂಕಿನಲ್ಲಿ 1457 ಹೆ. ನಷ್ಟು ವಿಸ್ತೀರ್ಣದಲ್ಲಿ ಬೆಳೆ ನಷ್ಟವಾಗಿರುವ ಬಗ್ಗೆ) ಜಂಟಿ ಸಮೀಕ್ಷೆ ಕೈಗೊಂಡು ವರದಿ ಮಾಡಲಾಗಿರುತ್ತದೆ.
- ಮುಂದುವರೆದು (ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಅಕ್ಟೋಬರ್ ಮಾಹೆಯಲ್ಲಿ ಶೇ.34 ರಷ್ಟು ಕಡಿಮೆ ಮಳೆಯನ್ನು ಪಡೆದಿದ್ದು, ತೇವಾಂಶದ ಕೊರತೆಯಿಂದ ಬೆಳೆಯು ಬಾಡುತ್ತಿದ್ದು, 2690 ಹೆ. ವಿಸ್ತೀರ್ಣದಲ್ಲಿ ರಾಗಿ ಬೆಳೆಯು ಶೇ.50ಕ್ಕಿಂತ ಹೆಚ್ಚು ಬೆಳೆ ನಷ್ಟವಾಗಿರುವುದು ಕಂಡು ಬಂದಿದೆ.)

**ಹಿಂಗಾರು ಬೆಳೆ ವಿಸ್ತೀರ್ಣ:**-2018-19ನೇ ಸಾಲಿನಲ್ಲಿ ಹಿಂಗಾರಿನಲ್ಲಿ ಒಟ್ಟು 704 ವಿಸ್ತೀರ್ಣದ ಗುರಿ ಇದ್ದು, ಇದುವರೆಗೂ 589.33 ಹೆ. ಪ್ರದೇಶದಲ್ಲಿ

ಬಿತ್ತನೆಯಾಗಿರುತ್ತದೆ.(ಮುಂಗಾರು ಹಂಗಾಮಿನ ಲೇಟ್ ಖರೀಫ್ ನ ಹುರುಳಿ ವಿಸ್ತೀರ್ಣವೂ ಸೇರುದಂತೆ)

- **ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ 4 ತಾಲ್ಲೂಕುಗಳನ್ನ ಸರ್ಕಾರದ ಆದೇಶ ಸಂ. ಕೃಇ/186 ಟಿಎನ್ಆರ್ 2018, ದಿನಾಂಕ 25.09.2018 (Part-1), ದಿನಾಂಕ 12.10.2018 ರಲ್ಲಿ ಬರ ಪೀಡಿತ ಪ್ರದೇಶವೆಂದು ಘೋಷಿಸಿರುವ ಹಿನ್ನಲೆಯಲ್ಲಿ ಶೇ.10ರಷ್ಟು ಬರಪೀಡಿತ ಪ್ರದೇಶದಲ್ಲಿ ground truthing ಕ್ರಮ ಕೈಗೊಂಡು, ಒಟ್ಟಾರೆ ಬರಪೀಡಿತ ಪ್ರದೇಶದಲ್ಲಿ 471.69 ಹೆ ಹುರುಳಿ ಬೆಳೆ ನಷ್ಟದ ಬಗ್ಗೆ ಸರ್ಕಾರಕ್ಕೆ ವರದಿ ಮಾಡಲಾಗಿದೆ.**

- ಕೃಷಿ ಪರಿಕರ:

2018 ನೇ ಮುಂಗಾರು ಹಂಗಾಮಿನಲ್ಲಿ ತೀವ್ರ ಬರಪೀಡಿತ ತಾಲ್ಲೂಕು ಎಂದು ಘೋಷಣೆಯಾಗಿರುವ ಆನೇಕಲ್ ತಾಲ್ಲೂಕಿನಲ್ಲಿ ಒಟ್ಟು 84 ಹಳ್ಳಿಗಳಲ್ಲಿ ಮಳೆಯಾಶ್ರಿತ ರಾಗಿ ಬೆಳೆ ನಷ್ಟದ ಮಾಹಿತಿಯನ್ನು Crop loss Moduel ಅಳವಡಿಸಲಾಗಿದ್ದು, ಸದರಿ ಹಳ್ಳಿಗಳಿಗೆ ಅನುಗುಣವಾಗಿ ಒಟ್ಟು 4671 ಫಲಾನುಭವಿಗಳಿರುತ್ತಾರೆ.

ರಸಗೊಬ್ಬರಗಳ ಮಾಹಿತಿ :-

- 2018-19 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜನವರಿ 2019 ರ ಮಾಹೆಯವರೆಗೆ ಬೇಡಿಕೆಯು 42336 ಮೆ.ಟನ್ ಇದ್ದು 53424 ಮೆ.ಟನ್ ಸರಬರಾಜಾಗಿದ್ದು, 39552 ಮೆ.ಟನ್ ರಷ್ಟು ವಿತರಣೆಯಾಗಿದು, ಒಟ್ಟಾರೆ ಮುಂಗಾರಿನ ಉಳಿಕೆಯೂ ಸೇರಿದಂತೆ 3870 ಮೆ.ಟನ್ ರಸಗೊಬ್ಬರ ಇದ್ದು ಯಾವುದೇ ಕೊರತೆ ಇರುವುದಿಲ್ಲ.
- ಕಾಪು ದಾಸ್ತಾನು ಅಡಿಯಲ್ಲಿ ಒಟ್ಟು 458 ಮೆ.ಟನ್ ರಸಗೊಬ್ಬರ ದಾಸ್ತಾನು ಇರುತ್ತದೆ. ಅಭಾವದ ಸಂದರ್ಭದಲ್ಲಿ ಮಾತ್ರ ವಿತರಿಸಲು ಕ್ರಮ ವಹಿಸಲಾಗುವುದು.

**ಬೀಜಗಳ ಪೂರೈಕೆ :-** 2018-19 ನೇ ಸಾಲಿನಲ್ಲಿ **ಮುಂಗಾರು ಹಂಗಾಮಿನಲ್ಲಿ** ವಿವಿಧ ಬಿತ್ತನೆ ಬೀಜಗಳ 1272.44 ಕ್ವಿಂ. ಬೇಡಿಕೆಗೆ 944.57ಕ್ವಿಂ. ಸರಬರಾಜು ಆಗಿ, 746.79 ಕ್ವಿ. ವಿತರಣೆಯಾಗಿರುತ್ತದೆ, ಬೇಸಿಗೆಯಲ್ಲಿ ಭತ್ತ ಬಿತ್ತನೆ ಬೀಜ 15 ಕ್ವಿಂ. ಬೇಡಿಕೆಗೆ 4ಕ್ವಿಂ. ಸರಬರಾಜು ಆಗಿ, 2.75 ಕ್ವಿ. ವಿತರಣೆಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

3. **ಮೇವಿನ ಲಭ್ಯತೆ ವರದಿ:-**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮೇವಿನ ಲಭ್ಯತೆ ಬಗ್ಗೆ ಮಾಹಿತಿ ಕೋರಲಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳನ್ನು ಸರ್ಕಾರವು ಬರಪೀಡಿತ ಪ್ರದೇಶಗಳೆಂದು ಘೋಷಿಸಿದ್ದು ದಿನಾಂಕ: 05-04-2019 ರಂತೆ ಜಿಲ್ಲೆಯಲ್ಲಿ ಒಟ್ಟು 64239 ಟನ್ ಮೇವು ಲಭ್ಯವಿದ್ದು 13 ವಾರಗಳಿಗೆ ನಿಭಾಯಿಸಬಹುದಾಗಿದೆ. ಪ್ರಸ್ತುತ ಸಾಲಿನಲ್ಲಿ 3252 ಮೇವಿನ ಬೀಜದ ಕಿರು ಪೊಟ್ಟಣಗಳನ್ನು ಜಿಲ್ಲೆಯಲ್ಲಿನ ರೈತರಿಗೆ ವಿತರಣೆ ಮಾಡಲಾಗಿದೆ. ಮಾರ್ಚ್ ಮಾಹೆಯಲ್ಲಿ 1451 ಮೇವಿನ ಬೀಜದ ಕಿರು ಪೊಟ್ಟಣಗಳನ್ನು ನಾಲ್ಕು ತಾಲ್ಲೂಕುಗಳಿಗೆ ಸರಬರಾಜು ಮಾಡಿದೆ ಎಂದು ಸಭೆಯಲ್ಲಿ ತಿಳಿಸಿದರು.

i) ಜಾನುವಾರುಗಳಿಗೆ ನೀರಿನ ಲಭ್ಯತೆ ಬಗ್ಗೆ:-

ಜಾನುವಾರುಗಳಿಗೆ ನೀರಿನ ಕೊರತೆ ಕಂಡುಬಂದಿರುವುದಿಲ್ಲ ಹಾಗೂ ಗ್ರಾಮಗಳಲ್ಲಿ ಜಾನುವಾರುಗಳಿಗೆ ಕುಡಿಯುವ ನೀರಿನ 200 ತೊಟ್ಟಿಗಳು ಇದ್ದು ಇನ್ನೂ 444 ತೊಟ್ಟಿಗಳ ಅವಶ್ಯಕತೆ ಇದ್ದು ಇಲಾಖೆಗೆ ವರದಿ ಸಲ್ಲಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ii) ಜಾನುವಾರುಗಳ ಆರೋಗ್ಯದ ಬಗ್ಗೆ:-

ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ನೀಡಲಾಗಿದೆ. ದಿನಾಂಕ: 28-01-2019 ರಿಂದ 16-02-2019ರ ವರೆಗೆ 15ನೇ ಸುತ್ತಿನ ಕಾಲುಬಾಯಿರೋಗದ ನಿಯಂತ್ರಣ ಲಸಿಕಾ ಕಾರ್ಯಕ್ರಮ ನಡೆದಿದ್ದು ಒಟ್ಟು 169545 ರಾಸುಗಳಿಗೆ ಲಸಿಕೆಯನ್ನು ನೀಡಲಾಗಿದೆ. ದಿನಾಂಕ: 10-01-2019 ರಿಂದ 15-02-2019ರವರೆಗೆ ಪಿ.ಪಿ.ಆರ್

ನಿಯಂತ್ರಣ ಲಸಿಕಾ ಕಾರ್ಯಕ್ರಮ ನಡೆಸಿದ್ದು ಒಟ್ಟು 36597 ಕುರಿ ಮತ್ತು ಮೇಕೆಗಳಿಗೆ ಲಸಿಕೆಯನ್ನು ನೀಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಎಲ್ಲಾ ಇಲಾಖೆಯ ವಿಷಯಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ/ಇಲಾಖಾ ಮುಖ್ಯಸ್ಥರ ಮಟ್ಟದಲ್ಲಿ ಇತ್ಯರ್ಥವಾಗಲಿರುವ ಪ್ರಕರಣಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರಿಗೆ ಸಲ್ಲಿಸಲು ಸೂಚನೆ ನೀಡಲಾಯಿತು.

ಸಭೆಯಲ್ಲಿ ಚರ್ಚಿಸಿ ನೀಡಿದ ಸೂಚನೆಗಳನ್ವಯ ಪ್ರಗತಿಯನ್ನು ಸಾಧಿಸಿ ಮುಂದಿನ ಸಭೆಗೆ ಪ್ರಗತಿ ವರದಿಯನ್ನು ಸಲ್ಲಿಸಲು ಸೂಚನೆ ನೀಡಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಅಂಜುಮ್ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆ
ಹಾಗೂ ಬೆಂಗಳೂರು ನಗರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬೆಂಗಳೂರು ಜಿಲ್ಲೆ.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಂಬಂಧಪಟ್ಟ ಜಿಲ್ಲೆಗಳಿಗೆ ಏಪ್ರಿಲ್-2019 ತಿಂಗಳಲ್ಲಿ ಭೇಟಿ ನೀಡಿ ಪರಿಶೀಲನಾ ಸಭೆ ನಡೆಸಿರುವ ಬಗ್ಗೆ ವರದಿ.

| ಕ್ರಮ ಸಂ. | ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ | ಉಸ್ತುವಾರಿ ಜಿಲ್ಲೆಯ ಹೆಸರು | ದಿನಾಂಕ |
|---|---|---|---|
| 1 | ಅನ್ಬುಕುಮಾರ್ ವಿ | ಕೊಡಗು | 10.04.2019 |
| 2 | ಪಂಕಜ್ ಕುಮಾರ್ ಪಾಂಡೆ | ಚಿತ್ರದುರ್ಗ | 20.04.2019 |
| 3 | ಆಮ್ಲನ್ ಆದಿತ್ಯ ಬಿಸ್ವಾಸ್ | ಗದಗ | 25.04.2019 |
| 4 | ಡಾ. ಶಾಲಿನಿ ರಜನೀಶ್ | ತುಮಕೂರು | 30.04.2019 |
| 5 | ಡಾ. ಜಿ. ಕಲ್ಪನ | ಮೈಸೂರು | 29.04.2019 |
| 6 | ಮಹೇಶ್ವರ್ ರಾವ್ | ಉಡುಪಿ | 27.04.2019 |
| 7 | ಅಂಜುಂ ಪರ್ವೇಜ್ | ಬೆಂಗಳೂರು ನಗರ | 03.04.2019 |
| 8 | ರಾಕೇಶ್ ಸಿಂಗ್ | ಬೆಳಗಾವಿ | 09.04.2019 |
| 9 | ವಿ.ಮಂಜುಲ | ಕೋಲಾರ | ~~27.04.2019~~ 6/5/19 |

10. ಡಾ. ಎಸ್. ನಾಗಾಂಬಿಕಾದೇವಿ. ಚಿಕ್ಕಬಳ್ಳಾಪುರ 29.04.2019

11. ತುಷಾರ್ ಗಿರಿನಾಥ್ ಪ್ರಾದೇಶಿಕ ಆಯುಕ್ತರು ಬೆಳಗಾವಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಾಗಲಕೋಟೆ. 20/4/2019

ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಬೆಳಗಾವಿ ವಿಭಾಗ, ಬೆಳಗಾವಿ - 590 002.
OFFICE OF THE REGIONAL COMMISSIONER, BELAGAVI DIVISION, BELAGAVI
ದೂರವಾಣಿ Telephone 0831-2404007
ಫ್ಯಾಕ್ಸ Fax 0831-2404008
Email: rcbgm-kar@nic.in
Website:regional-commissioner-belgaum.gov.in

ಕ್ರ.ಪ್ರಾಆಬೆ/ಆಶಾ/ವಿವ/08/2019-20 ದಿ. 22-04-2019

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು
ಇವರಿಗೆ_

ಮಾನ್ಯರೇ,

ವಿಷಯ : ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮಗೆ ಹಂಚಿಕೆ ಮಾಡಲಾದ **ಜಿಲ್ಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವ ಕುರಿತು**
ಉಲ್ಲೇಖ : 1. ಸಂಖ್ಯೆ : ಸಿಆಸುಇ 19 ಇಸಿಪ 2018, ದಿನಾಂಕ: 11/07/2018

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ನನ್ನನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಬಾಗಲಕೋಟೆ ಜಿಲ್ಲೆಗೆ ನೇಮಿಸಲಾಗಿರುತ್ತದೆ. ಅದರಂತೆ 8ನೇ ಬಾರಿ ದಿನಾಂಕ:20/04/2019 ರಂದು ಬಾಗಲಕೋಟೆ ಜಿಲ್ಲೆಗೆ ಭೇಟಿ ನೀಡಿ ಪರಿಶೀಲನೆ ಸಭೆ ನಡೆಸಿರುವ ಕುರಿತು ಸಿದ್ಧಪಡಿಸಿರುವ ನಡುವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಘನ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ತುಷಾರ್ ಗಿರಿ ನಾಥ್)
ಪ್ರಾದೇಶಿಕ ಆಯುಕ್ತರು,
ಬೆಳಗಾವಿ ವಿಭಾಗ, ಬೆಳಗಾವಿ

<u>ಪ್ರತಿಯನ್ನು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರಿಗೆ.

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಪ್ರತಿ ತಿಂಗಳು ಸರ್ಕಾರದ ಮುಖ್ಯಕಾರ್ಯದರ್ಶಿಯವರಿಗೆ ಸಲ್ಲಿಸಬೇಕಾದ ವರದಿಯ ನಮೂನೆ

| ಕ್ರ ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಬಳ್ಳಾರಿ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಹೆಸರು | ಗೌರವ ಗುಪ್ತ, ಭಾ.ಆ.ಸೇ |
| 3 | ಭೇಟಿಯಾದ / ಪ್ರವಾಸದ ದಿನಾಂಕ | 18.04.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಇದರೊಂದಿಗೆ ಲಗತ್ತಿಸಿದೆ. |

(ಗೌರವ ಗುಪ್ತ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ಹಾಗೂ
ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಆಸು ಇಲಾಖೆ – (ಆಸು),
ಬಹುಮಹಡಿ ಕಟ್ಟಡ,